1895—96ನೇ ಸಾಲಿಗೆ ಸಾರಾಯಿ ಬಿಕರೀ ಗುತ್ತಿಗೆ ಫಿರ್ಕಾಗಳ ಹರಾಜು.

ಇಸ್ತಿಹಾರ್‌ನಾಮೆ.

ನಂ. 15941—R. F. 210—92, ತಾರೀಖು 29ನೇ ಮಾರ್ಚಿ 1895.

1. ಇದಕ್ಕೆ ಲಗತ್ತಿರುವ ಪಟ್ಟಿಯಲ್ಲಿ ವಿವರಿಸಲ್ಪಟ್ಟಿರುವ ಗೊತ್ತಾದ ಪ್ರದೇಶಗಳಲ್ಲಿ ಯಾ ಫಿರ್ಕಾಗಳಲ್ಲಿ 12 ತಿಂಗಳು ಅಂದರೆ 1895ನೇ ಇಸವಿ ಜುಲೈ ಗುರ್ರೇ ತಾರೀಖು ಲಾಗಾಯತು 1896ನೇ ಇಸವಿ ಜೂ೯ 30ನೇ ತಾರೀಖಿಗೆ ಪೂರೈಸುವ ಸರ್ಕಾರ ಸಾಲ್ ಆಫೈರ್ ವರೆಗೆ ಸಾರಾಯಿಯನ್ನು ಬಿಕರಿಮಾಡುವ ಒಟ್ಟು ಸ್ವಾತಂತ್ರ್ಯದ ಹಕ್ಕು ಆಯಾಯ ಡೆಪ್ಯುಟಿ ಕಮ್ಮಿಷನರುಗಳಿಂದ ಯಾ ಇದ ಕ್ಕಾಗಿ ಅವರಿಂದ ನೇಮಿಸಲ್ಪಡಬಹುದಾದ ಅಸಿಸ್ಟೆಂಟ್ ಕಮ್ಮಿಷನರುಗಳಿಂದ ಶಿವಮೊಗ್ಗ ಡಿಸ್ಟ್ರಿಕ್ಟಿನ ಹರಾಜನ್ನು ಆ ಡಿಸ್ಟ್ರಿಕ್ಟು ಹೆಡ್ ಕ್ವಾರ್ಟರ್‌ನಲ್ಲಿಯೂ ಇತರ ಡಿಸ್ಟ್ರಿಕ್ಟುಗಳ ಬಾಬತನ್ನು ಆಯಾ ಡಿಸ್ಟ್ರಿಕ್ಟುಗಳ ತಾಲ್ಲೂಕು ಕಸಬಾಗಳಲ್ಲಿಯೂ ಮೇಲ್ಕಂಡ ಪಟ್ಟಿಯಲ್ಲಿ ನಮೂದ್ಮಾಡಿರುವ ತಾರೀಖುಗಳಲ್ಲಿ ಈ ಕೆಳಗೆ ಉದಹರಿಸಲ್ಪಟ್ಟಿರುವ ಷರತ್ತುಗಳಿಗೆ ಬಳಪಟ್ಟು ಹರಾಜೆ ಹಾಕಲ್ಪಡಲು ಮೈಸೂರ ಸರ್ಕಾರದಿಂದ ಈ ಇಸ್ತಿಹಾರುಮೂಲಕ ಪ್ರಕಟಿಸಲ್ಪಟ್ಟಿದೆ, ಹರಾಜ್‌ಗಳು ಸದರೀ ತಾರೀಖುಗಳಲ್ಲಿ ಪೂರೈಸದೇಹೋದಲ್ಲಿ ಮಾರನೇ ದಿನ ಗಳಲ್ಲಿಯೂ ಹಾಕಲ್ಪಡುವವು. ಮೇಲ್ಕಂಡ ಫಿರ್ಕಾಗಳ ಪೈಕಿ ಒಂಟಿಯಾಗಿ ಯಾವದಕ್ಕಾದರೂ ದರಖಾಸ್ತುಗಳೇನೂ ಬಾರದೆ ಹೋದಲ್ಲಿ ಹರಾಜ್ ಹಾಕುವ ಆಫಿಸರರು ಒಂದಕ್ಕಿಂತ ಹೆಚ್ಚು ಫಿರ್ಕಾಗಳನ್ನ ಸೇರಿಸಿಯಾಗಲಿ ಫಿರ್ಕಾಗಳನ್ನ ತಾಲ್ಲೂಕುವಾರ್ ಹರಾಜ್ ಮಾಡುವದರ ಮೂಲಕವಾಗಿ ಆಗಲಿ ಯಾ ಹಾಲಿ ಅಂಗಡಿಗಳನ್ನು ಓಟಾಗದೆ ಇರುವ ವಿಶೇಷ ಫಿರ್ಕಾಗಳನ್ನು ಮುಂದೆ ಪೈಸಲ್ಮಾಡಲು ಅವಶ್ಯಕ ವಿದ್ದರೆ ಉಳಿಸಿಕೊಳ್ಳುವದರ ಮೂಲಕವಾಗಲಿ ಯುಕ್ತಾನುಸಾರ ಸದರೀ ಫಿರ್ಕಾಗಳನ್ನ ಬದಲಾಯಿಸಬಹುದು.

2. ಮೇಲೆ ವಿವರಿಸಲ್ಪಟ್ಟಿರುವ ಒಟ್ಟು ಸ್ವಾತಂತ್ರ್ಯದ ಹಕ್ಕು ಫಿರ್ಕಾವಾರು ಹರಾಜ್ ಮಾಡಲ್ಪಡುತ್ತೆ. ಹರಾಜ್ ಮಾಡಲ್ಪಟ್ಟ ಪ್ರತಿ ಫಿರ್ಕಾವೂ ಅಂಗೀಕರಿಸಲ್ಪಡತಕ್ಕ ಛಡ ಸವಾಲದಾರನಿಗೆ ಡೆಪ್ಯುಟಿ ಕಮ್ಮಿಷನರವರ ಕೃಮವಾದ ಮಂಜೂರಾತಿಗೆ ಬಳಪಟ್ಟು ಕೊಡಲ್ಪಡುವದು. ಡೆಪ್ಯುಟಿ ಕಮ್ಮಿಷನರವರು ತಮ್ಮ ಯುಕ್ತಾನುಸಾರ ಸವಾಲನ್ನ ಅಂಗೀಕರಿಸುವದಕ್ಕೂ ಯಾ ತಿರಸ್ಕರಿಸುವದಕ್ಕೂ ಸ್ವತಂತ್ರರಾಗಿರುತ್ತಾರೆ. ಹಾಗೆ ಕೃಮವಾಗಿ ಮಂಜೂರ್ಮಾಡಲ್ಪಡೋಣವು ಸವಾಲನ್ನ ಅಂಗೀಕರಿಸಿದಂತೆ ಭಾವಿಸಲ್ಪಡತಕ್ಕದ್ದು.

3. ಸವಾಲ್ಮಾಡಲು ಇಷ್ಟವುಳ್ಳವರು ಖುದ್ದಾಗಿ ಆಗಲಿ ಯಾ ಅಪ್ಪಣೆ ಹೊಂದಲ್ಪಟ್ಟಿರುವ ಮುತಾಲೀಕರ ಮೂಲಕವಾಗಿ ಆಗಲಿ ಹಾಜರಾಗಬೇಕು. ಯಾವದಾದರೊಂದು ಫಿರ್ಕಾದ ಒಟ್ಟು ಸ್ವಾತಂತ್ರ್ಯದ ಹಕ್ಕನ್ನು ಹರಾಜಿನಲ್ಲಿ ಕೊಡಲ್ಪಟ್ಟ ಸವಾಲುದಾರನು ಯಾವದನೇ ಫಿರ್ಕಾದ ಹರಾಜ್ ಪುರುವಾಗುವದಕ್ಕೆ ತತ್ಪೂರ್ವವೇ ತನ್ನ ಸದರೀ ಸವಾಲಿನ ಮೊಬಲಗಿನಲ್ಲಿ ಇಪ್ಪತ್ತರಲ್ಲಿ ಒಂದು ಭಾಗಕ್ಕೆ ಸರಿಯಾದ ಮೊಬಲಗನ್ನು ಠೇವಣೀ ಇಡಬೇಕು. ಮತ್ತು ಡೆಪ್ಯುಟಿ ಕಮ್ಮಿಷನರವರಿಂದ ಹರಾಜ್ ಮಂಜೂರಾದ ಸಂಗತಿಯು ಆತನಿಗೆ ಲಿಖಿತಮೂಲಕ ತಿಳಿಸಲ್ಪಟ್ಟ ಹದಿನೈದು ದಿವಸಗಳೊಳಗಾಗಿ ಮೊದಲು ಯಿಡೋಣಾದ ಠೇವಣೀ ದೇಬೀಲ್ ಆತನ ಮೂರು ತಿಂಗಳ ಗುತ್ತಿಗೆ ಹಣಕ್ಕೆ ಸಮಾನವಾಗುವಷ್ಟು ಠೇವಣಿಯನ್ನಿಡಬೇಕು. ಹಾಗೆ ಮಾಡದೆ ತಪ್ಪಿದಲ್ಲಿ ಮೊದಲು ಇಟ್ಟಿರುವ ಠೇವಣೀ ಮೊಬಲಗನ್ನ ಸರಕಾರಕ್ಕೆ ದಂಡವಾಗಿ ಕೇರಿಸಿಕೊಳ್ಳುವದಲ್ಲದೆ ಡೆಪ್ಯುಟಿ ಕಮ್ಮಿಷನರವರು ಅಪ್ಪಣೆ ಕೊಡುವ ರೀತ್ಯ ಸದರೀ ಒಟ್ಟು ಸ್ವಾತಂತ್ರ್ಯದ ಹಕ್ಕು ತಕ್ಷಣವೇ ಪುನಃ ಹರಾಜ್ ಮಾಡಲ್ಪಡುವದು ಯಾ ಅನ್ಯಥಾ ವಿಲೇವಾರಿ ಮಾಡಲ್ಪಡುವದು.

4. ಮೇಲ್ಕಂಡ 3ನೇ ಕಲಂ ಪ್ರಕಾರ ನಡಿಸಲ್ಪಡುವ ದುಸರೆ ಹರಾಜ್‌ಗಳು ತಪ್ಪಿತಸ್ಥನಾದ ಮೇಲ್ಕಂಡ ಸವಾಲ್‌ದಾರನ ಜವಾಬ್ದಾರೀ ಮೇಲೆ ನಡಿಸಲ್ಪಡುವವು. ಸದರೀ ಸವಾಲ್ಕಾರನು ಯಾಲ್ಲಾ ಆದಾಯವನ್ನೂ ಕಳದುಕೊಳ್ಳತಕ್ಕದ್ದಲ್ಲದೆ ದುಸರೆ ಹರಾಜಿನಿಂದ ಸರ್ಕಾರಕ್ಕೆ ನಷ್ಟವಾದ ಪಕ್ಷದಲ್ಲಿ ಪೂರಾ ಹರಾಜಿನ ಷರತ್ತುಗಳನ್ನನುಸರಿಸಿ ಮೇಲ್ಕಂಡ ಪೂರಾ ಕಾಲಕ್ಕೆ ಆತನಿಂದ ವಾಪತಿಯಾಗಬೇಕಾಗಿದ್ದ ಒಟ್ಟು ಮೊಬಲಗಿನಲ್ಲಿ ದುಸರೆ ಹರಾಜಿನಲ್ಲಿ ಪಡದ ಸವಾಲ್‌ದಾರನಿಂದ ವಾಪತಿಯಾಗತಕ್ಕ ಒಟ್ಟು ಮೊಬಲಗನ್ನು ವಜಾ ಮಾಡಿದರೆ ಉಳಿಯುವ ಶೇಷವನ್ನು ಆತನು ವಾಪತಿ ಮಾಡತಕ್ಕದ್ದು. ಈ ಸಂದರ್ಭದಲ್ಲಿ ದಂಡವಾಗಿ ದಾಖಲ್ಮಾಡಲ್ಪಟ್ಟ ಠೇವಣೀ ಮೊಬಲಗು ದುಸರೆ ಹರಾಜಿನಿಂದುಂಟಾದ ನಷ್ಟಕ್ಕೋಸ್ಕರ ವಜಾ ಮಾಡಲ್ಪಡತಕ್ಕದ್ದು. ತದನಂತರ ಬಾಕೀ ಏನಾದರೂ ನಿಂತಲ್ಲಿ ಆ ಮೊಬಲಗು ಜಮ್ಮಾ ಕಂದಾಯವು ಯಾವ ರೀತಿಯಾಗಿ ವಸೂಲ್ಮಾಡಲ್ಪಡುತ್ತೋ ಅದೇ ರೀತಿಯಾಗಿ ವಸೂಲ್ಮಾಡಲ್ಪಡುವದು. ಪರಂತು ದಂಡವಾಗಿ ದಾಖಲ್ಮಾಡಲ್ಪಟ್ಟ ಠೇವಣೀ ಮೊಬಲಗು ದುಸರೆ ಹರಾಜಿನಿಂದುಂಟಾದ ನಷ್ಟಕ್ಕಿಂತ ಹೆಚ್ಚಾಗಿರುವ ಪಕ್ಷದಲ್ಲಿ ಅಂಥಾ ಪೂರಾ ಠೇವಣೀ ಮೊಬಲಗು ಸರಕಾರಕ್ಕೆ ದಾಖಲ್ಮಾಡಿಕೊಳ್ಳಲ್ಪಡುವದು.

5. ಒಟ್ಟುಸ್ವಾತಂತ್ರ್ಯದ ಹಕ್ಕನ್ನು ಕೊಂಡುಕೊಂಡವನು ಈ ಕೆಳಗೆ ಉದಹರಿಸಲ್ಪಟ್ಟಿರುವ ಷರತ್ತುಗಳನ್ನ ಆಚರಿಸುವದಕ್ಕೆ ಬದ್ಧನಾಗಿರಲುಳ್ಳವನೆಂದು ಬಂದು ಕರಾರನ್ನು ಬರದು ರಜುವಾಡಿ ಕೊಡತಕ್ಕದ್ದು. ಕೊಂಡುಕೊಂಡವನು ಕರಾರನ್ನ ಸೈ ಮಾಡುವದಕ್ಕೆ ತಪ್ಪಿದಲ್ಲಿ ಯಾ ತಿರಸ್ಕರಿಸಿದಲ್ಲಿ ಮೊದಲೇ ಇಡಲ್ಪಟ್ಟ ವಿಶಿಷ್ಟ ಠೇವಣೀ ಮೊಬಲಗೂ ಸಾರ್ವತ್ರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಡುವದಲ್ಲದೆ ಸದರೀ ಒಟ್ಟು ಸ್ವಾತಂತ್ರ್ಯದ ಹಕ್ಕು 3 ಮತ್ತು 4ನೇ ಕಲಂಗಳಲ್ಲಿ ನಮೂದಿಸಿರುವಂತೆ ಸದರೀ ಪ್ರಥಮ ಖರೀದೀದಾರನ ಜವಾಬ್ದಾರಿವ ನಷ್ಟಕ್ಕೆ ಗುರಿಯಾಗಿ ದುಸರೆ ಹರಾಜ್ಮಾಡಲ್ಪಡುವದು ಯಾ ಅನ್ಯಥಾ ವಿಲೇವಾರಿ ಮಾಡಲ್ಪಡುವದು. ಹರಾಜ್ ಮಂಜೂರಾದ ಮೇಲೆ ಸದರೀ ಖರೀದಿದಾರನು ಸತ್ತುಹೋದ ಪಕ್ಷದಲ್ಲಿ ಅವನ ವಾರಸುದಾರರು ಯಾ ಆತನಿಂದ ಹಕ್ಕನ್ನ ಪಡದವರು ಸದರೀ ಕರಾರಿಗೆ ಜವಾಬ್ದಾರ್ರಾಗಿರುತ್ತಾರೆ.

6. ಹರಾಜ್ ಕಾಲದಲ್ಲಿ ಸವಾಲ್ಮಾಡಲು ಇಷ್ಟವುಳ್ಳವರಿಗೆ ಹಾಲಿ ಫಿರ್ಕಾಗಳ ಬಾಬತು ಅಂಗಡಿಗಳಲ್ಲಿ ಖರ್ಚಾದ ಸಾರಾಯಿಯ ತಪಶೀಲನ್ನು ತಿಳಿಸುವ ಬಂದು ತಖ್ತೆಯು ತೋರಿಸಲ್ಪಡುವದು. 1894—95ನೇ ಸಾಲ್ ಬಾಬತು ಪ್ರತಿ ಫಿರ್ಕಾದ ಗುತ್ತಿಗೆ ಮೊಬಲಗೂ ಇದಕ್ಕೆ ಲಗತ್ತಿಥುವ ಪಟ್ಟಿಯಲ್ಲಿ ವಿವರಿಸಲ್ಪಟ್ಟಿರುತ್ತೆ.

7. ಕರಾರು ಬರದುಕೊಟ್ಟು ಕೂಡ್ಲೆ ಖರೀದಿದಾರನಿಗೆ ಡಿಪ್ಯೂಟಿ ಕಮ್ಮಿಷನರವರು ಈ ಕೆಳಗೆ ಉದಹರಿಸಿರುವ ಷರತ್ತುಗಳಿಗೆ ಒಳಪಟ್ಟು ವಿಧಿಸಲ್ಪಟ್ಟ ನಮೂನೆಯಲ್ಲಿ ಸದರೀ ಒಟ್ಟು ಸ್ವಾತಂತ್ರ್ಯದ ಹಕ್ಕನ್ನ ನೆಮೊದಿಸಿ ಬಂದು ಲೈಸೆನ್ಸನ್ನ ಕೊಡುವರು.

(1) ಸದರೀ ಒಟ್ಟು ಸ್ವಾತಂತ್ರ್ಯದ ಹಕ್ಕು ಸಾಧಾರಣವಾಗಿ 20° ಡಿಗ್ರಿ ಅಂಡರ್ ಪ್ರೂಫ್ ಬಲವುಳ್ಳ ಸಾರಾಯಿಯನ್ನು ಮಾರುವದಕ್ಕೆ ಮಾತ್ರವೇ ಲಗಾವಾಗುತ್ತೆ. ಪರಂತು ಡಿಪ್ಯೂಟಿ ಕಮ್ಮಿಷನರವರ ಯಾ ಇವರಿಂದ ಅಧಿಕಾರ ಕೊಡಲ್ಪಟ್ಟ ಇತರ ಆಫಿಸರರ ವಿಶೇಷ ಅಪ್ಪಣೆ ಮೂಲಕ 30° ಡಿಗ್ರಿ ಅಂಡರ್ ಪ್ರೂಫ್ ಬಲವುಳ್ಳ ಸಾರಾಯಿಯನ್ನು ಮಾರಬಹುದು. ಆದರೆ ಬೆಂಗಳೂರು ಸೆಂಟ್ರಲ್ ಡಿಸ್ಟಿಲೇರಿಯಲ್ಲಿ ತಯಾರಾಗುವ ಯಾವ ಜೋರಿನದಾದರೂ ಡಬ್ಬಲ್ ಡಿಸ್ಟಿಲ್ಡ್ ಯಾನೆ ದುಗುಣೀ ಬಟ್ಟೀ ಇಳಿಸಲ್ಪಟ್ಟಿರುವ ಷರಾಬುಗಳನ್ನೂ ಮತ್ತು ಇತರ ವಿಶೇಷವಾದ ಸಾರಾಯಿಗಳನ್ನೂ ಮಾರಲಿಕ್ಕೆ ಹಕ್ಕು ಇರುವದಿಲ್ಲವು. ಈ ಷರಾಬುಗಳನ್ನೂ ವ ಸಾರಾಯಿಗಳನ್ನೂ ಮಾರಲಿಕ್ಕೆ ಪರಾಯಿ ದೇಶದ ಸಾರಾಯಿಗಳ ಅಂಗಡಿಕಾರ್ರಿಗೆ ಮಾತ್ರವೇ ಅಪ್ಪಣೆ ಕೊಡಲ್ಪಟ್ಟಿರುತ್ತೆ.

(2) ಸದರೀ ಸ್ವಾತಂತ್ರ್ಯದ ಹಕ್ಕನ್ನು ಪಡದುಕೊಂಡದ್ದಕ್ಕೆ ಕೊಡಬೇಕಾದ ಮೊಬಲಗು ಸರ್ಕಾರದಿಂದ ಆ ಬಗ್ಯೆ ವಿಧಾಯಕವಾಗಿ ಅಚ್ಚು ಹಾಕಿಸಲ್ಪಟ್ಟಿರುವ ಚಲ್ತಗಳ ಮೂಲಕ ಸ್ಥಳೀಯವಾದ ಸರ್ಕಾರದ ಖಜಾನೆಗಳಿಗೆ 1895ನೇ ಇಸವಿ ಜುಲೈ ಮಾಹೆ ಲಾಗಾಯತು ಸರಿಯಾದ ತಿಂಗಳಗಟ್ಟಿ ಖಿಸ್ತು ಪ್ರಕಾರ ಪಾವತಿ ಮಾಡಲ್ಪಡುತ್ತಾ ಬರತಕ್ಕದ್ದು. ಪ್ರತಿಯೊಂದು ಖಿಸ್ತು ಯಾವ ತಿಂಗಳಿಗೆ ಪಾವತಿಯಾಗತಕ್ಕದ್ದೋ ಆ ತಿಂಗಳಿನ ಗುತ್ತಿಗೆ ಮೊಬಲಗೆಂದು ಭಾವಿಸಲ್ಪಡತಕ್ಕದ್ದು. ಪ್ರತಿಯೊಂದು ತಿಂಗಳ ಗುತ್ತಿಗೆ ಮೊಬಲಗೂ ಆ ತಿಂಗಳ 20ನೇ ತಾರೀಖು ಯಾ ಅದಕ್ಕೆ ಪೂರ್ವವೇ ಪಾವತಿಯಾಗತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ತಾಲ್ಲೂಕು ಅಮಲ್‌ದಾರ್ರು ಲೈಸೆನ್ಸನ್ನು ಬರಹ ರೂಪವಾದ ಆರ್ಡರ್ ಮೂಲಕ ರದ್ದುಮಾಡತಕ್ಕದ್ದು. ಮತ್ತು ಆ ತಿಂಗಳ ಆಖೈರೊಳಗೆ ಫಿರಕಾವನ್ನು ಪುನಃ ಹರಾಜ್ ಮಾಡತಕ್ಕದ್ದು ಷರತ್ತುಗಳಂತೆ ನಡಿಯದೆ ತಪ್ಪಿ ಹೋದಂಥಾ ಲೈಸೆನ್ಸದಾರನ ಫಿರಕಾವನ್ನು ಹಾಲಿ ಅದರಲ್ಲಿರುವ ಅಂಗಡಿಗಳ ಸಂಬಿಗೆ ಒಡದು ಪ್ರತಿ ಒಂದು ಷಾಪುಕೀಪರು ಒಪ್ಪಿಕೊಳ್ಳುವ ಗುತ್ತಿಗೆ ಮೊಬಲಗಿಗೆ ಲೈಸೆನ್ಸಗಳನ್ನು ಕೊಡುವ ಅಧಿಕಾರವು ಅಮಲ್‌ದಾರ್ರಿಗೆ ಕೇರಿರುತ್ತೆ. ಆದರೆ ಈ ರೀತಿ ಉತ್ಪತ್ತಿಯಾಗುವ ಒಟ್ಟು ಗುತ್ತಿಗೆ ಮೊಬಲಗು ಮೊದಲು ಫಿರಕಾವನ್ನು ಪಡದು ಇದ್ದವನು ಕೊಡಲು ಒಪ್ಪಿದ್ದ ಮೊಬಲಗಿಗೆ ಕಮ್ಮಿಯಾಗಿರಕೂಡದು.

(3) ಪ್ರತಿ ಮಾಹೆಯ ಗುತ್ತಿಗೆ ಮೊಬಲಗನ್ನು ಆ ಮಾಹೆಯ 20ನೇ ತಾರೀಖು ಯಾ ಅದಕ್ಕೆ ಪೂರ್ವ ಪಾವತಿ ಮಾಡದೆ ತಪ್ಪಿದಲ್ಲಿ ಲೈಸೆನ್ಸದಾರನು ಇಟ್ಟಿರುವ ಎರಡು ತಿಂಗಳ ಡಿಪಾಜಿಟ್‌ಯಾನೆ ಠೇವಣಿ ಮೊಬಲಗು ಮೇಲಿನ ಷರತ್ತು 2ರ ಪ್ರಕಾರ ದುಸರೆ ಹರಾಜಿನಲ್ಲಿ ನಷ್ಟವೇನಾದರು ಉಂಟಾದಲ್ಲಿ ಅದರ ಭರ್ತಿಗಾಗಿ ಬೇಕಾಗುವ ಮೊಬಲಗು ಜಾತಾ ಉಳಿದ ಮೊಬಲಗು ಗವರ್ನಮೆಂಟಿಗೆ ದಂಡವಾಗಿ ತೆಗದುಕೊಳ್ಳಲ್ಪಡುವದು. ಲೈಸೆನ್ಸದಾರನಿಂದ ಠೇವಣಿ ಇಡಲ್ಪಟ್ಟಿರುವ ಮೊಬಲಗು ಗುತ್ತಿಗೆ ಅವಧಿಯ ಕೊನೆ 2 ತಿಂಗಳಿನ ಖಿಸ್ತುಗಳಿಗೋಸ್ಕರ ಉಪಯೋಗಿಸಲ್ಪಡತಕ್ಕದ್ದು.

(4) (*a*) ಈ ಸರ್ಕಾರಕ್ಕೆ ಸಾರಾಯಿಯನ್ನೂ ಒಳದೇಶದ ಇತರ ಷರಾಬುಗಳನ್ನೂ ತಯಾರ್ಮಾಡಲಿಕ್ಕೆ ಮೊಕರರ್ಮಾಡಲ್ಪಟ್ಟಿರುವ ಭಟ್ಟಿದಾರ್ರಾದ ಪ್ಯಾರಿ ಅಂಡ್‌ಕೋ ಎಂಬ ವರ್ತಕರಿಂದಾಗಲಿ ಯಾ ಸರ್ಕಾರದ ಅಪ್ಪಣೆ ಮೇರೆ ವಿಚಾರ್ಮಾಡಾಗುವ ಯಾವ ದಾದರೊಂದು ಬಾಂಡೆಡ್ ಡಿಪೋ ಯಿಂದಲಾಗಲಿ ಲೈಸೆನ್ಸದಾರನು ತನ್ನ ಫಿರ್ಕಾ ಅಂಗಡಿಗಳಿಗೆ ಸರಬರಾಯಿಗೋಸ್ಕರ ಸಾರಾಯಿಯನ್ನ ಕೊಂಡುಕೊಳ್ಳತಕ್ಕದ್ದು. ಅಂಥಾ ಭಟ್ಟಿದಾರ್ರಿಂದ ಸರಬರಾಯಿ ಆಗುವ ಸಾರಾಯಿನ ದರವು 20° ಡಿಗ್ರಿ ಅಂಡರ್ ಪ್ರೂಫ್ ಜೋರಿನ ಸಾರಾಯಿಯ ಗ್ಯಾಲ್ ೧ಕ್ಕೆ $10\frac{1}{2}$ ಆಣೆ ಪ್ರಕಾರವೂ ಮತ್ತು ಸದರೀ ಜೋರಿಗಿಂತ ಕಮ್ಮಿ ಜೋರುಳ್ಳ ಸಾರಾಯಿಗಳಿಗೆ ಕ್ಯಾಸೆಲ್ಲೂ ಎಂಬುವರ ಸೂತ್ರಗಳನ್ನನುಸರಿಸಿ ಅದೇ ದಾಮಾಷಾಯಿ ದರಗಳ ಪ್ರಕಾರವೂ ಇರತಕ್ಕದ್ದು. ಲೈಸೆನ್ಸದಾರನು 20° ಡಿಗ್ರಿ ಅಂಡರ್ ಪ್ರೂಫ್ ಜೋರಿನ ಸಾರಾಯಿಯ ಗ್ಯಾಲ್ ೧ಕ್ಕೆ 5—5—0 ದರದ ಪ್ರಕಾರವೂ ಸದರೀ ಜೋರಿಗಿಂತ ಕಮ್ಮಿಯಾದ ಸಾರಾಯಿಗಳಿಗೆ ಅದರ ದಾಮಾಷಾಯಿ ದರದಂತೆಯೂ ಜನಗಳಿಗೆ ಮಾರತಕ್ಕದ್ದು.

(*b*) ಮೇಲ್ಕಂಡ ಖರೀದಿ ದರ ಶಿವಾಯಿ ಡಿಸ್ಟಿಲೇರಿಯಾನೆ ಭಟ್ಟೀ ಗಡಂಗಿನಿಂದ ಯಾ ಸರ್ಕಾರದ ಅಪ್ಪಣೆ ಪ್ರಕಾರ ಸ್ಥಾಪಿಸಲ್ಪಟ್ಟಿರುವ ಯಾವದಾದರೊಂದು ಬಾಂಡೆಡ್ ಡಿಪೋಯಿಂದ ಸಾರಾಯಿ ಒಯ್ಯಲ್ಪಡುವದಕ್ಕೆ ಪೂರ್ವ 20° ಡಿಗ್ರಿ ಅಂಡರ್ ಪ್ರೂಫ್ ಜೋರುಳ್ಳ ಸಾರಾಯಿಯ ಗ್ಯಾಲ್ ೧ಕ್ಕೆ 4 ರೂಪಾಯಿ ದರದಂತೆ ಎಕ್ಸೈಜ್ ಡ್ಯೂಟಿ ಯಾನೆ ಹಾಸಲು 6ನೇ ಷರತ್ತು ಅನುಸರಿಸಿ ಸ್ಥಳೀಯ ಸರ್ಕಾರದ ಖಜಾನೆಗೆ ಮುಂಗಡವಾಗಿ ಪಾವತಿ ಮಾಡಲ್ಪಡಬೇಕಾಗಿರುತ್ತೆ.

(5) ಲೈಸೆನ್ಸದಾರನು ಮೇಲ್ಕಂಡ ಡ್ಯೂಟೀ ಮೊಬಲಗನ್ನ ಸ್ಥಳೀಯ ತಾಲ್ಲೂಕು ಖಜಾನೆಯಲ್ಲಿ ಪಾವತಿ ಮಾಡಿ ವಿಧಿಸೋಣಾಗಿರುವ ನಮೂನೆಯಲ್ಲಿ ಬಂದು ರಸೀತಿಯನ್ನ ಪಡಿಯತಕ್ಕದ್ದು. ಅಂಥಾ ರಸೀತಿಯನ್ನೂ ಮತ್ತು ಆ ರಸೀತಿಯಲ್ಲಿ ಕಂಡ ಮೊಬಲಗಿಗೆ ತಕ್ಕ ಸಾರಾಯಿ ಸರಬರಾಯಿಗೆ ಬಂದು ದರಖಾಸ್ತನ್ನೂ ಹಾಜರ್ಪಡಿಸಿ ಅಂಥಾ ಷರಾಬಿಗೆ ವಿಧಿಸಿರುವ ಖರೀದಿಯನ್ನ ಭಟ್ಟಿದಾರರಿಗಾಗಲಿ ಯಾ ಅವರ ವಿಜಂಟಿಗಾಗಲಿ ಯಾ ಈ ಬಗ್ಯೆ ಸರ್ಕಾರದಿಂದ ನೇಮಿಸಲ್ಪಡುವ ಯಾವ ಮನುಷ್ಯನಿಗಾಗಲಿ ಪಾವತಿ ಮಾಡಿದ ನಂತರ ಡಿಸ್ಟಿಲೇರಿ ಜೆಮ್ಮೇದಾರಿರುವ ಅಸಿಸ್ಟೆಂಟ್ ಸೂಪರ್‌ವೈಜರ್ ಅಥವಾ ಇತರ ಆಫಿಸರರು ಯಾ ಬಾಂಡೆಡ್ ಡಿಪೋ ಜೆಮ್ಮೇದಾರನು ಟೈಜರ್ ಆಫಿಸರ್ರ ರಸೀತಿಯಲ್ಲಿ ನಮೂದ್ಮಾಡಿರುವ ಡ್ಯೂಟಿ ಮೊಬಲಗ್ಯೆ ಸರಿಯಾದ ಸಾರಾಯಿಯನ್ನ ಸರಬರಾಯಿ ಮಾಡಿ ಆ ರಸೀತಿಯಲ್ಲಿ ಸಾರಾಯಿ ರವಾನೆ ಮಾಡಿರುವ ತಾರೀಖು ಮತ್ತು ಘಂಟೆ ನಮೂದ್ಮಾಡಿ ಎಕ್ಸೈಜ್ ಕಮ್ಮಿಷನರ್ ಸಾಹೆಬರವರ ಆಫಿಸಿಗೆ ಆ ರಸೀತಿಯನ್ನ ರವಾನಿಸತಕ್ಕದ್ದು. ಅಸಿಸ್ಟೆಂಟ್ ಸೂಪರ್‌ವೈಜರವರು ಅಥವಾ ಮೇಲೆ ಹೇಳಲ್ಪಟ್ಟ ಇತರ ಆಫಿಸರರು ಯಾ ಬಾಂಡೆಡ್ ಡಿಪೋ ಜೆಮ್ಮೇದಾರನು ವಿಧಾಯಕ

ವಾಗಿರುವ ನಮೂನೆಯಲ್ಲಿ ಡಿಸ್ಟ್ರಿಲೇರಿ ಅಥವಾ ವೇರ್ ಹೌಸಿನಿಂದ ಸಾರಾಯಿ ರವಾನೆ ಮಾಡುವದಕ್ಕೋಸ್ಕರ ಜಾರೀಲಿರುವ ನಿಬಂಧನೆಗಳ ಪ್ರಕಾರ ವಿಧಾಯಕವಾದ ನಮೂನೆಯಲ್ಲಿ ದ್ವಿಪ್ರತಿಯಾಗಿ ರಹದಾರಿಯನ್ನ ಕಳುಹಿಸತಕ್ಕದ್ದು. ಬಾಂಡೆಡ್ ಡಿಪೋಯಿಂದ ಸಾರಾಯಿಯನ್ನ ಪಡಿಯುವಂಥಾ ಲೈಸೆನ್ಸದಾರನು ಅಂಥಾ ಸಾರಾಯಿಯ ಖರೀದಿಯನ್ನೂ ಮತ್ತು ಡ್ಯೂಟಿ ಮೊಬಲಗನ್ನೂ ಸಹ ಸ್ಥಳೀಯ ತಾಲ್ಲೂಕು ಖಜಾನೆಯಲ್ಲಿ ಪಾವತಿ ಮಾಡಬೇಕು.

(6) ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿನ ಲೈಸೆನ್ಸದಾರನು ತನ್ನ ಫಿರ್ಕಾ ಸರಹದ್ದಿನಲ್ಲಿ ಡಿಪ್ಯೂಟಿ ಕಮ್ಮಿಷನರವರಿಂದಲೂ ಮತ್ತು ತನ್ನಿಂದಲೂ ಅವಶ್ಯಕವೆಂದು ಎಣಿಸಲ್ಪಡತಕ್ಕ ಸ್ಥಳ ಯಾ ಸ್ಥಳಗಳಲ್ಲಿ ಕೋಠಿ ಯಾ ಕೋಠಿಗಳನ್ನು ಸ್ಥಾಪಿಸತಕ್ಕದ್ದು. ಈ ಕೋಠಿಗಳಿಗೆ ತಾನು ಖರೀದಿಗೆ ಪಡಪ ಸಾರಾಯಿಯನ್ನ ಅಂಗಡಿಕಾರರಿಗೆ ಕೊಡುವದಕ್ಕೆ ತತ್ಪೂರ್ವವೇ ಹಾಲಿ ಜಾರೀಲಿರುವ ನಿಬಂಧನೆಗಳನ್ನನುಸರಿಸಿ ರವಾನಿಸಿದ ಸರಕನ್ನ ಮೊಕಾಬಿಲೆ ವಗೈರೆ ಮಾಡತಕ್ಕ ಬಗ್ಯೆ ತೆಗದುಕೊಂಡು ಹೋಗತಕ್ಕದ್ದು. ಸದರೀ ಕೋಠಿಗಳು ಡೆಪ್ಯೂಟಿ ಕಮ್ಮಿಷನರವರ ಯಾ ಎಕ್ಸೈಜ್ ಇಲಾಖೆ ಇತರ ಅಧಿಸರರ ತನಿಖೆ ಬಗ್ಯೆ ಸದಾ ಖುಲ್ಲಾವಾಗಿರತಕ್ಕದ್ದು. ವಿಧಾಯಕವಾದ ನಮೂನೆಯಲ್ಲಿ ಡಿಪ್ಯೂಟಿ ಕಮ್ಮಿಷನರಿಂದ ಲೈಸೆನ್ಸ ಹೊಂದದೆ ಅಂಥಾ ಕೋಠಿಯು ಇಡಲ್ಪಡಲಾಗದು. ಉಳಿದ 7 ಡಿಸ್ಟ್ರಿಕ್ಟುಗಳ ಲೈಸೆನ್ಸದಾರರಿಂದ ಈಗಿನ ಹಾಗೆ ಶಿಬ್ಬಂದೀ ವ ಬಾಡಿಗೆ ಖರ್ಚುಗಳು ಭರಿಸಲ್ಪಟ್ಟು ಅವರು ಹಾಲಿ ಜಾರೀಲಿರುವ ಬಾಂಡೆಡ್ ಡಿಪೋಗಳಿಂದಲೇ ಸಾರಾಯಿ ಸರಬರಾಯಿ ಪಡಿಯಬೇಕಲ್ಲದೆ ಅವರ ಅಂಗಡಿಗಳಿಗೆ ರವಾನೆ ಮಾಡಲು ಸದರೀ ಡಿಪೋಗಳಲ್ಲಿ ಅದನ್ನು ಇಡತಕ್ಕದ್ದು.

(7) ಡಿಸ್ಟಿಲೇರಿ ಯಾ ಬಾಂಡೆಡ್ ಡಿಪೋಯಿಂದ ಯಾ ಫಿರ್ಕಾ ಕೋಠಿಯಿಂದ ರವಾನಿಸಲ್ಪಟ್ಟ ಸ್ಥಿತಿಯಲ್ಲಿ ಸಾರಾಯಿಯು ಮಾರಲ್ಪಡತಕ್ಕದ್ದು. ಮತ್ತು ಅಂಗಡಿಗಳಲ್ಲಿ ಯಾವ ರೀತಿಯಿಂದಲೂ ಇತರ ಪದಾರ್ಥಗಳಿಂದ ಕೆಡಿಸಲ್ಪಡಲಾಗದು ಯಾ ನೀರಿನಿಂದ ಮಿಶ್ರಮಾಡಲಾಗದು.

(8) ಲೈಸೆನ್ಸದಾರನು ತನ್ನಿಂದ ಖರೀದಿಗೆ ತೆಗದುಕೊಳ್ಳಲ್ಪಟ್ಟ ಮತ್ತು ಅಂಗಡಿಕಾರರಿಗೆ ಕೊಟ್ಟ ಸಾರಾಯಿಯ ಪರಿಮಾಣವನ್ನೂ ಮತ್ತು ಜೋರನ್ನೂ ಕುರಿತು ಸರಿಯಾದ ಲಿಖ್ಕಗಳನ್ನಿಡಬೇಕು. ಆತನಿಂದ ಕೊಂಡುಕೊಳ್ಳಲ್ಪಟ್ಟ ಸಾರಾಯಿಯೊಡನೆ ರವಾನಿಸಿದ ರಹದಾರಿಗಳು ಹಾಲಿ ಜಾರೀಲಿರುವ ಯಾ ಮುಂದೆ ಆಗಿಂದಾಗ್ಯೆ ಸರ್ಕಾರದಿಂದ ಸಾದರ್ಮಾಡಲ್ಪಡಬಹುದಾದ ನಿಬಂಧನೆಗಳನ್ನನುಸರಿಸಿ ಅಜಮಾಯಿಷಿಗೂ ವ ತನಿಖೆಗೂ ಗುರಿಯಾಗತಕ್ಕದ್ದು.

(9) ವಿಧಾಯಕವಾದ ನಮೂನೆಯಲ್ಲಿ ಡೆಪ್ಯೂಟಿ ಕಮ್ಮಿಷನರಿಂದ ಕ್ರಮವಾಗಿ ಲೈಸೆನ್ಸ ಪಡದ ದುರ್ಕಾಗಳಲ್ಲಿ ವಿನಹಾ ಮತ್ತೆಲ್ಲಿಯೂ ಸಾರಾಯಿ ಬಿಕರಿ ಮಾಡಲಾಗದು ಮತ್ತು ಎಕ್ಸೈಜ್ ಕಮ್ಮಿಷನರವರ ಮುಂಚಿತವಾದ ಮಂಜೂರಾತಿ ಲ್ಲದೆ ಹೊಸದಾಗಿ ಅಂಗಡಿಗಳನ್ನಿಡಕೂಡದು.

(10) ಡೆಪ್ಯೂಟಿ ಕಮ್ಮಿಷನರವರು ತಮಿಗೆ ಯುಕ್ತ ಕಾಣಿಸಿದಾಗ ಯಾವ ದುರ್ಕಾಗಳನ್ನಾಗಲಿ ಮುಚ್ಚಲು ಅಥವಾ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವರ್ಗಾಯಿಸಲು ಅಪ್ಪಣೆ ಕೊಡಬಹುದು.

(11) ಲೈಸೆನ್ಸದಾರನು ತನ್ನ ಲೈಸೆನ್ಸಿನ ವಾಯಿದೆ ವಳಗೆ ಲೈಸೆನ್ಸಿನಲ್ಲಿ ವ್ಯಕ್ತ ಪಟ್ಟಿರುವ ಫಿರಕಾವಿನ ಯಾವ ಭಾಗದಲ್ಲಾದರೂ ಕೀಂದಿ ಮಾರತಕ್ಕ ಒಟ್ಟು ಸ್ವಾತಂತ್ರ್ಯದ ಹಕ್ಕಿನ ವಿಷಯದಲ್ಲಿ ಯಾವ ವಿಧವಾದ ಸಂಬಂಧವನ್ನೂ ಇಟ್ಟುಕೊಳ್ಳಕೂಡದು. ಅಥವಾ ಅವನ ಫಿರ್ಕಾವಿನ ಯಾವ ಭಾಗದಲ್ಲಾದರೂ ಕೀಂದಿ ಬಿಕರಿ ಮಾಡತಕ್ಕ ಒಟ್ಟು ಸ್ವಾತಂತ್ರ್ಯದ ಹಕ್ಕನ್ನು ವಹಿಸಿರತಕ್ಕ ಯಾವ ಮನುಷ್ಯನನ್ನೂ ಬಳದೇಶದ ಸಾರಾಯಿ ಮಾರುವ ತನ್ನ ಒಟ್ಟು ಸ್ವಾತಂತ್ರ್ಯದ ಹಕ್ಕಿನಲ್ಲಿ ಪಾಲುದಾರನನ್ನಾಗಿ ಆಗಲಿ ಯಾ ಸಂಬಂಧವುಳ್ಳವನನ್ನಾಗಿ ಆಗಲಿ ಇಟ್ಟುಕೊಳ್ಳಕೂಡದು. ಅಥವಾ ತನ್ನ ಲೈಸೆನ್ಸ ವಾಯಿದೆ ಅಂದರ್‌ವಾರ್ ಎಕ್ಸೈಜ್ ಕಮ್ಮಿಷನರವರ ಲಿಖಿತ ಮೂಲಕವಾದ ಹುಕುಂ ಇಲ್ಲದೆ ಬ್ರಿಟಿಷ್ ಸರ್ಕಾರದ ಕೈ ಕೆಳಗಿರುವ ಮದರಾಸ್ ಯಾ ಬೊಂಬಾಯಿ ರಾಜ್ಯಾಧಿಪತ್ಯದ ಯಾವ ಡಿಸ್ಟ್ರಿಕ್ಟುಗಳಲ್ಲಾಗಲಿ, ಯಾ ಇತರ ಪರಾಯಿ ದೇಶದ ಯಾ ಸೀಮೆಯಲ್ಲಾಗಲಿ ಲೈಸೆನ್ಸದಾರನು ಯಾವದೊಂದು ಸಾರಾಯಿ ಗುತ್ತಿಗೆಯಲ್ಲಿ ಪ್ರತ್ಯಕ್ಷವಾದ ಯಾ ಪರೋಕ್ಷವಾದ ಸಂಬಂಧವನ್ನ ಇಟ್ಟುಕೊಂಡಿರಕೂಡದು.

(12) ಲೈಸೆನ್ಸದಾರನು 1895ನೇ ಇಸವಿ ಜುಲೈ ಗುರ್ತಿಯಲ್ಲಿ ತನ್ನ ಫಿರ್ಕಾದೊಳಗಿರುವ ಹಾಲೀ ಬಾಂಡೆಡ್ ಡಿಪೋದಲ್ಲಿ ಯಾ ಫಿರ್ಕಾ ಕೋಠಿಯಲ್ಲಿ ಯಾ ಆತನ ಅಂಗಡಿಗಳಲ್ಲಿ ಹಾಜರಿರತಕ್ಕ ವಾಯಿದೆ ವಿಾರದ ಗುತ್ತಿಗೆದಾರನ ಬಾಬತು ದಾಸ್ತಾನ್ ಸಾರಾಯಿಯನ್ನ ಎಕ್ಸೈಜ್ ಕಮ್ಮಿಷನರ್ ಸಾಹೆಬರವರು ಗೊತ್ತುಮಾಡಬಹುದಾದ ಪರಿಹಾರ ದ್ರವ್ಯವನ್ನು ಪೂರ್ವದ ಗುತ್ತಿಗೆದಾರನಿಗೆ ಪಾವತಿ ಮಾಡಿ ತೆಗದುಕೊಳ್ಳಲು ಗುರಿಯಾಗಿರತಕ್ಕದ್ದು.

(13) ಲೈಸೆನ್ಸದಾರನು ಹಾಲೀ ಜಾರೀಲಿರುವ ಎಕ್ಸೈಜ್ ಕಾನೂನುಗಳಿಗೂ ನಿಬಂಧನೆಗಳಿಗೂ ಅಥವಾ ಆಗಿಂದಾಗ್ಯೆ ಎಕ್ಸೈಜ್ ಕಾನೂನುಗಳ ಪ್ರಕಾರ ವಿಧಿಸೋಣಾಗುವ ಹೆಚ್ಚು ನಿಬಂಧನೆಗಳಿಗೂ ಅನುಸಾರವಾಗಿ ನಡೆದುಕೊಳ್ಳಲು ಬದ್ಧನಾಗಿರತಕ್ಕದ್ದು. ಲೈಸೆನ್ಸದಾರನು ಸರ್ಕಾರದಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ಅಳತೆ ಸಾಧನೆಗಳನ್ನ ಉಪಯೋಗಿಸತಕ್ಕದ್ದು. ಮತ್ತು ಸಾರಾಯಿಯನ್ನು ಸಾಗಿಸುವ ಬಗ್ಯೆ ಬೇಕಾದ ಲಿಖ್ತ, ರಹದಾರಿ ಅಥವಾ ಪ್ಯಾಸ್ ಇವುಗಳಿಗೆ ವಿಧಾಯಕವಾದ ನಮೂನೆಗಳನ್ನು ಸ್ಥಳೀಕ ಎಕ್ಸೈಜ್ ಅಧಿಸರುಗಳಿಂದ ಕೊಂಡುಕೊಂಡು ತಾನೆ ವದಗಿಸಿಕೊಳ್ಳತಕ್ಕದ್ದು.

(14) ಈ ಗುತ್ತಿಗೆಯು ಎಕ್ಸೈಜ್ ಕಮ್ಮಿಷನರ್ ಸಾಹೆಬರವರ ಅಪ್ಪಣೆ ಶಿವಾಯಿ ವರ್ಗವಾಗತಕ್ಕದ್ದಲ್ಲ.

(15) ತೆಗದುಕೊಳ್ಳಲ್ಪಟ್ಟಿದ್ದ ಫಿರ್ಕಾಗಳ ಪೂರಾ ಯಾ ಒಂದು ಭಾಗಕ್ಕಾಗಿ ಬರುವ ರಾಜೀನಾಮೆಗಳನ್ನು ಡೆಪ್ಯೂಟಿ ಕಮ್ಮಿಷನರವರು ವಿಚಾರ ಮಾಡಿದೆ ತಿರಸ್ಕರಿಸುವರು.

8. ಲೈಸೆನ್ಸದಾರನಿಂದಲಾಗಲೀ ಯಾ ಆತನ ತಿಳುವಳಿಕೆ ಯಾ ಪ್ರೋತ್ಸಾಹ ಯಾ ಉದಾಸೀನದ ದೆಶೆಯಿಂದ ಆತನ ನೌಕರಿಯ ಲ್ಲಿರುವ ಯಾವ ಮನುಷ್ಯನಿಂದಲಾಗಲೀ ಮೇಲ್ಕಂಡ ಷರತ್ತುಗಳು, ಯಾ ಲೈಸೆನ್ಸಿನ ಕರಾರುಗಳು ಉಲ್ಲಂಘಿಸಲ್ಪಟ್ಟ ಪಕ್ಷದಲ್ಲಿ ಯಾ ಆತನು ಅಂಗಡಿಗಳನ್ನು ತೆಗಿಯುವದರಲ್ಲಿ ಅಸ್ರದ್ಧೆಯಾಗಿದ್ದಲ್ಲಿ ಯಾ ಗುತ್ತಿಗೆ ಕೆಲಸದಲ್ಲಿ ಸರಿಯಾದ ಜಾಗರೂಕತೆ ಮತ್ತು ಲಕ್ಷ್ಯ ಕೊಡಲು ತಪ್ಪಿದ ಸಂದರ್ಭದಲ್ಲಿ ಅಂಥಾ ಲೈಸೆನ್ಸದಾರನಿಗೆ ಪ್ರತಿಯೊಂದು ಉಲ್ಲಂಘನೆಗೆ 50 ರೂಪಾಯಿಗಳಿಗೆ ಮೀರದ ಜುರ್ಮಾನೆ ಯನ್ನ ವಿಧಿಸಲಿಕ್ಕೂ ಅಥವಾ ಡೆಪ್ಯುಟಿ ಕಮಿಶ್ನರವರವರ ಇಷ್ಟಾನುಸಾರ ಅವರಲ್ಲಿ ಠೇವಣಿ ಇಡಲ್ಪಟ್ಟಿರುವ ಮೊಬಲಗು ದಂಡವಾಗಿ ದಾಖಲ್ಮಾಡಿ ಕೊಳ್ಳಲ್ಪಟ್ಟಿರುತ್ತೆಂದು ಹುಕುಂ ಮಾಡಲಿಕ್ಕೂ, ಲೈಸೆನ್ಸನ್ನ ರದ್ದು ಮಾಡಿ ಸದರೀ ಲೈಸೆನ್ಸದಾರನ ಜವಾಬುದಾರಿ ಮೇಲೆ ಸದರೀ ಸರ್ವ ಸ್ವತಂತ್ರದ ಹಕ್ಕನ್ನ ಪುನಃ ಹರಾಜು ಮಾಡಲಿಕ್ಕೂ, ಯಾ ಅಂಥಾ ಗುತ್ತಿಗೆ ಫಿರ್ಕಾವನ್ನ ಸರ್ಕಾರದ ಆಡಳಿತದಲ್ಲಿಡಲಿ ಕ್ಕೂ ಡೆಪ್ಯುಟಿ ಕಮಿಶ್ನರವರು ಮೊಖ್ತ್ಯಾರರಾಗಿರತಕ್ಕದ್ದು. ಇದರಿಂದ ಉಂಟಾದ ಎಲ್ಲಾ ನಷ್ಟವನ್ನೂ 1895ನೇ ಇಸವಿ ಜುಲೈ ಗುರ್ರೇ ತಾರೀಖಿನಲ್ಲಿ ತನ್ನ ಅಂಗಡಿಗಳನ್ನು ತೆಗದು ಕೆಲಸ ನಡಿಸುವದರಲ್ಲಿ ಅಶ್ರದ್ಧೆ ಮಾಡೋಣದರಿಂದ ಸರ್ಕಾರಕ್ಕೆ ಉಂಟಾಗುವ ಎಲ್ಲಾ ನಷ್ಟಗಳೂ ದೇಖೀಲ್ ಸದರೀ ಲೈಸೆನ್ಸದಾರನು ಪಾವತಿ ಮಾಡತಕ್ಕದ್ದು. ಯಾವದಾದರೂ ಗುತ್ತಿಗೆಯು ರದ್ದು ಮಾಡಲ್ಪಟ್ಟರೆ ಹೀಗಾ ಕಾಲದ ಗುತ್ತಿಗೆ ಹಣವು ಕೂಡ್ಲೆ ಪಾವತಿ ಮಾಡಲಿಕ್ಕೆ ಗುರಿಯಾಗುತ್ತೆ. ಅಂಥಾ ಎಲ್ಲಾ ದಂಡದ ವ ನಷ್ಟದ ಮೊಬಲಗು ಗಳು ಜಮೀರ್ ಕಂದಾಯದ ಬಾಕಿಯಂತೆ ವಸೂಲ್ಮಾಡಲ್ಪಡತಕ್ಕದ್ದು.

9. ಮೇಲಿನ ಹಿಂದಿನ ಷರತ್ತಿನಲ್ಲಿ ಕಂಡ ಪ್ರಕಾರ ಜುರ್ಮಾನೆ ವಿಧಿಸೋಣ, ಠೇವಣಿ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊ ಳ್ಳೋಣ, ಲೈಸೆನ್ಸ ರದ್ದು ಮಾಡೋಣ ಈ ಸಂದರ್ಭಗಳು ಹಾಲಿ ಜಾರೀಲಿರುವ ಎಕ್ಸೈಜ್ ಕಾನೂ ಪ್ರಕಾರ ಶಿಕ್ಷಿಸಲ್ಪಡತಕ್ಕ ಯಾವ ತಪ್ಪಿತಕ್ಕಾದರೂ ಲೈಸೆನ್ಸದಾರನನ್ನಾಗಲೀ, ಯಾ ಆತನ ಏಜಂಟನ್ನಾಗಲಿ, ಯಾ ಆತನ ನವುಕರರನ್ನಾಗಲೀ ಆಪಾದಿಸಿ ದರ್ಯಾಫ್ತ್ ಕ್ರಮ ನಡಿಸಲು ಆತಂಕ ಪಡಿಸುವದೆಂದು ಭಾವಿಸಲ್ಪಡಕೂಡದು.

ಹುಕುಂ ಬವೋಜೇಬ್,
ಎಲ್. ಅನಂತಸ್ವಾಮಿರಾವ್,
ಅಫಿಸಿಯೇಟಿಂಗ್ ಚೀಫ್ ಸೆಕ್ರಿಟೇರಿ.

ಷೆಡ್ಯೂಲ್‌ಪಟ್ಟ.

ತಾಲ್ಲೂಕು.	ಗುತ್ತಿಗೆ ಫಿರ್ಕಾ ಪ ಕ್ಕನು ನಂಬರು.	ನಾರಾಯಿ ಬಿಕರೀ ಗುತ್ತಿಗೆ ಫಿರ್ಕಾಗಳ ತಪಶೀಲ್. ಫಿರ್ಕಾದಲ್ಲಿ ಅಡಗಿರುವ ಹೋಬ್ಳಿಗಳ ಹೆಸರುಗಳು.	ಗುತ್ತಿಗೆ ಫಿರ್ಕಾದ ಹೆಸರುಗಳು.	ಪ್ರತಿ ಫಿರ್ಕಾದ ಗುತ್ತಿಗೆ ಮೊಬಲಗು. 1892—93	1893—94	1894—95	ದಪ್ಪತಿ ಬಂದು ಫಿರ್ಕಾದಲ್ಲಿ ಬಿಕರಿಯಾದ ಸರಾಬ್ ತಪಸೀಲ್. 1892—93	1893—94	1894—95 ಉ ತಿಂಗಳ ಬಿಕ್ರಿ.	ಹರಾಜು ತಾರೀಖು.	ಷರಾ.
			ಬೆಂಳ್ಳೂರು ಡಿ||	ರೂ.	ರೂ.	ರೂ.	ಗ್ಯಾಲಾ.	ಗ್ಯಾಲಾ	ಗ್ಯಾಲಾ.	
ಬೆಂಗಳೂರು.	I	ಕೆಂಗೇರಿ ..	ಕೆಂಗೇರಿ	786	560	560	1616	1589	866	1ನೇ ನವೆಂ 2ನೇ ಮೇ 1895.	
	II	ಬೇಗೂರು ..	ಬೇಗೂರು	661	400	770	2325	2327	1108		
	III	ಹಲಸೂರು ..	ಹಲಸೂರು	711	756	1330	3329	3316	2241		
	IV	ಯಸವಂಚಪುರ ..	ಯಸವಂಚಪುರ	1834	1088	1215	3703	3227	1953		
	V	ಅಗರ ..	ಅಗರ	1504	1120	1710	4070	4498	2229		
	VI	ಯಲಹಂಕ ..	ಯಲಹಂಕ	851	804	1000	2385	2454	1434		
	VII	ಕೃಷ್ಣರಾಜಪುರ ..	ಕೃಷ್ಣರಾಜಪುರ	534	524	620	1701	1765	963		
	VIII	ವರ್ತೂರು ..	ವರ್ತೂರು	600	440	520	1706	1757	928		
ಆನೇಕಲ್.	IX	ಆನೆಕಲ್ಲು .. ಇಗ್ಗೂರು .. ಅತ್ತಿಬೆಲೆ ..	ಆನೆಕಲ್ಲು	1281	1052	1404	3477	3427	1967	15ನೇ ಮೇ 1895	
	X	ಬೆಗಣಿ .. ಹಾರಗದ್ದೆ ..	ಬೆಗಣಿ	342	244	396	1229	1268	664		
	XI	ಸರ್ಜಾಪುರ ..	ಸರ್ಜಾಪುರ	701	1140	1692	4190	4232	2203		
	XII	ಬಿದರಗುಪ್ಪೆ ..	ಬಿದರಗುಪ್ಪೆ	701							
ಚನ್ನಪಟ್ಟ.	XIII	ಕೆಂಪ್ಲೀಸ್‌ಪೇಟೆ .. ಮಾಕಳಿ .. ಬಿಡದಿ .. ಕೂಂಗಲ್ ..	ಕೆಂಪ್ಲೀಸ್‌ಪೇಟೆ	1600	1332	1632	3812	3820	1797	17ನೇ ಮೇ 1895	
	XIV	ಬೈರಮಂಗಲ .. ಚನ್ನಪಟ್ಟಣ ..	ಚನ್ನಪಟ್ಟಣ	1422	1440	1740	3401	3531	2248		
	XV	ಮಳೂರು .. ಹೊಂಗನೂರು .. ಮುದಿಗೆರೆ .. ವಿರುಪಾಕ್ಷಿಪುರ ..	ಹೊಂಗನೂರು	160			881	1138	722		
ಮಾಗಡಿ.	XVI	ಮಾಗಡಿ .. ಸಾತನೂರು ..	ಮಾಗಡಿ	156	384		1073	1034	504	22ನೇ ಮೇ 1895	
	XVII	ಗುಡೇಮಾರನಹಳ್ಳಿ .. ಸೋಲೂರು .. ಕುದೂರು .. ತಿಪ್ಪಸಂದ್ರ .. ನಾರಸಂದ್ರ .. ಹುಲಿಕಲ್ಲು ..	ಗುಡೇಮಾರನಹಳ್ಳಿ	80	60	642	317	308	180		
	XVIII	ತಾವರೇಕೆರೆ .. ಮಡಬಾಳ ..	ತಾವರೇಕೆರೆ	200	204	204	694	2020	387		
ದೊಡ್ಡಬಳ್ಳಾಪುರ.	XIX	ದೊಡ್ಡಬಳ್ಳಾಪುರ .. ಕಾಕೋಳ .. ಕೋಡಿಹಳ್ಳಿ .. ತೂಬಗೆರೆ .. ರಾಜಘಟ್ಟ .. ಹೊನ್ನಾವರ .. ಹುಲಿಕುಂಟೆ .. ತಿಪ್ಪೂರು ..	ದೊಡ್ಡಬಳ್ಳಾಪುರ	1480	1240	1325	3158	2481	1210	8ನೇ ಮೇ 1895	

ಷೆಡ್ಯೂಲ್ ಪಟ್ಟಿ.

ತಾಲ್ಲೂಕು.	ಗುತ್ತಿಗೆ ಫಿರ್ಕಾದ ಕ್ರಮ ನಂಬರು.	ಸಾರಾಯಿ ಬಿಕರೀ ಗುತ್ತಿಗೆ ಫಿರ್ಕಾಗಳ ತಪಶೀಲ್. ಫಿರ್ಕಾದಲ್ಲಿ ಅಡಗಿರುವ ಹೋಬಳಿಗಳ ಹೆಸರುಗಳು.	ಗುತ್ತಿಗೆ ಫಿರ್ಕಾದ ಹೆಸರುಗಳು.	ಪ್ರತಿ ಫಿರ್ಕಾದ ಗುತ್ತಿಗೆ ಮೊಬಲಗು. 1892-93	1893-94	1894-95	ಪ್ರತಿ ಬಂದು ಫಿರ್ಕಾದಲ್ಲಿ ಬಿಕರಿಯಾದ ಪರಾಬಿನ ತಪಶೀಲ್ 1892-93	1893-94	1894—95 ಅರು ತಿಂಗಳು ಬಿಕರಿ.	ಹರಾಜು ತಾರೀಖು.	ಷರಾ.
				ರೂ.	ರೂ.	ರೂ.	ಗ್ಯಾಲ.	ಗ್ಯಾಲ.	ಗ್ಯಾಲ.		
ನೆಲಮಂಗಲ.	XX	ನೆಲಮಂಗಲ	ನೆಲಮಂಗಲ	810	728	860	1737	1803	1134	6ನೇ ಮೆ 1895	
	XXI	ಸೊಂಡೇಕೊಪ್ಪ ಮೈಲ್ನಹಳ್ಳಿ ಬೇಗೂರು ದೊಡ್ಡಬೆಲೆ ನಿಜಗಲ್	ಮೈಲ್ನಹಳ್ಳಿ	560	400	1700	1686	4554	1624		
ಹೊಸಕೋಟೆ.	XXII	ಹೊಸಕೋಟೆ ಸೂಲಿಬೆಲೆ	ಹೊಸಕೋಟೆ	1263	1224	1296	3688	3725	1973		
	XXIII	ವಾಗಟ ಕಾಡ್ಗೋಡಿ ಗುಬ್ಬಿ	ವಾಗಟ	565	808	888	1756	1868	1023	13ನೇ ಮೆ 1895	
	XXIV	ಮುಗಳೂರು	ಮುಗಳೂರು	226			900	970	507		
	XXV	ನಂದಗುಡಿ	ನಂದಗುಡಿ	412	428	480	1237	1171	708		
	XXVI	ಹುಲ್ಲೂರು	ಹುಲ್ಲೂರ	55	40	60	621	771	392		
ದೇವನಹಳ್ಳಿ.	XXVII	ದೇವನಹಳ್ಳಿ ಕುಂದಾಣ ಚನ್ನರಾಯಪಟ್ಣ	ದೇವನಹಳ್ಳಿ	1,090	884	1175	2699	2735	1146		
	XXVIII	ಜಾಲ ಬೂದಿಗೆರೆ	ಜಾಲ	441	404	480	1465	1376	795	10ನೇ ಮೆ 1895	
	XXIX	ವಡಿಗೇನಹಳ್ಳಿ	ವಡಿಗೇನಹಳ್ಳಿ	601	524	706	1830	1599	1064		
ಕಾರ್ಕಾಹಳ್ಳಿ.	XXX	ಕಾರ್ಕಾಹಳ್ಳಿ ಮರ್ಲವಾಡಿ ಮುದವಾಡಿ ತುಂಗಣಿ	ಕಾರ್ಕಾಹಳ್ಳಿ	620	720	984	1791	1889	959	20ನೇ ಮೆ 1895	
	XXXI	ಕೋಡಿಹಳ್ಳಿ ಸಾತನೂರು ಉಯ್ಯಂಬಳ್ಳಿ	ಕೋಡಿಹಳ್ಳಿ				983	1176	610		
	XXXII	ಹಾರೋಹಳ್ಳಿ ಸೋವನಹಳ್ಳಿ	ಸೋವನಹಳ್ಳಿ		156	180	659	628	315		

ಕೋಲಾರ ಡಿಸ್ಟ್ರಿಕ್ಟ್.

ಕೋಲಾರ್.	I	ಕೋಲಾರ ವಕ್ಕಲೇರಿ ಹುತ್ತೂರು	ಕೋಲಾರ	2,165	2960	4080	7766	7661	3145	1ನೇ ಮೆ 1895	
	II	ವೇಂಗಲ್									
	III	ಸುಗಟೂರು ದಳಸನೂರು ಹೊಳೂರು									
ಬೌರಿಂಗ್‌ಪೇಟೆ.	IV	ಬೌರಿಂಗ್‌ಪೇಟೆ ಬೂದಿಕೋಟೆ	ಬೌರಿಂಗ್‌ಪೇಟೆ	840	1212	1505	2856	2762	*2075	6ನೇ ಮೆ 1895	*ಬಾನಗರಹೊಸಹಳ್ಳಿ ಫಿರ್ಕಾ ಬಿಕರಿಯಿಲ್ಲ.
	V	ಕಾಮಸಂದ್ರ									

382

ಷೆಡ್ಯೂಲ್ ಪಟ್ಟಿ.

ತಾಲ್ಲೂಕು.	ಗುತ್ತಿಗೆ ಫಿರ್ಕಾದ ಕ್ರಮ ನಂಬರು.	ಸಾರಾಯಿ ಬಿಕರೀ ಗುತ್ತಿಗೆ ಫಿರ್ಕಾಗಳ ತಪಶೀಲ್. ಫಿರ್ಕಾದಲ್ಲಿ ಅಡಗಿರುವ ಹೋಬಳಿಗಳ ಹೆಸರುಗಳು.	ಗುತ್ತಿಗೆ ಫಿರ್ಕಾದ ಹೆಸರುಗಳು.	ಪ್ರತಿ ಫಿರ್ಕಾದ ಗುತ್ತಿಗೆ ಮೊಬಲಗು. 1892-93	1893-94	1894-95	ಪ್ರತಿ ಒಂದು ಫಿರ್ಕಾದಲ್ಲಿ ಬಿಕರಿಯಾದ ಪರಾಬಿನ ತಪಶೀಲ್. 1892-93	1893-94	1894-95 ಆದರೆ ಬಿಕ್ರಿಯಾಗಿಲ್ಲ ತಿಂಗಳ ಬಿಕ್ರಿ.	ಹರಾಜು ತಾರೀಖು.	ಷರಾ.
			ಕ್ಯೋಲಾರ್ ಡಿ||	ರೂ.	ರೂ.	ರೂ.	ಗ್ಯಾಲನ್	ಗ್ಯಾಲನ್	ಗ್ಯಾಲನ್	
ಬಾಂಗ್ಲೋಟೆ.	VI	ಚೇತಮಂಗಲ	ಚೇತಮಂಗಲ	300	604	1330	1050	1554	1200	6ನೇ ಮೆ 1895	
		ಕ್ಯಾಸಂಬಳ್ಳಿ									
		ರಾಮಸಾಗರ									
	VII	ದಾಸರ ಹೊಸಹಳ್ಳಿ	ದಾಸರಹೊಸಹಳ್ಳಿ	185	584	850	984	1073	0		
ಮಾಲೂರು.	VIII	ಮಾಲೂರು	ಮಾಲೂರು	975	992	1660	3203	3226	1788	3ನೇ ಮೆ 1895	
	IX	ನರಸಾಪುರ	ನರಸಾಪುರ	395	528	1030	1895	1728	963		
	X	ಲಕ್ಕೂರು									
	XI	ಮುಸ್ಟಿ									
		ಹುಳದೇನಹಳ್ಳಿ	ಮುಸ್ಟಿ	290	324	450	1062	1418	574		
		ತ್ಯಾಕಲ್ಲು									
ಮುಳಬಾಗಲ್.	XII	ಮುಳಬಾಗಲ್									
		ಬೈರಕೂರು									
		ಮಲ್ಲನಾಯಕನಹಳ್ಳಿ	ಮುಳಬಾಗಲು	550	644	800	2329	2336	1524		
		ಆವನಿ									
	XIII	ಯಲ್ಡೂರು								8ನೇ ಮೆ 1895	
		ದುಗ್ಗಸಂದ್ರ	ಯಲ್ಡೂರು	65	164	200	741	870	362		
ಚಿಕ್ಕಬಳ್ಳಾಪುರ.	XIV	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	2705	1908	3350	4198	5339	2343		
	XV	ನಂದಿ									
	XVI	ಮಂಡಿಕಲ್ಲು									
		ಪೆರೇಸಂದ್ರ	ಪೆರೇಸಂದ್ರ	125	112	220	711	754	484	13ನೇ ಮೆ 1895	
		ಪೂರ್ಣಸಾಗರ									
ಶಿಡ್ಲಘಟ್ಟ.	XVII	ಶಿಡ್ಲಘಟ್ಟ	ಶಿಡ್ಲಘಟ್ಟ	1000	992	1620	2181	2443	979		
	XVIII	ಜಂಗಂಕೋಟೆ	ಜಂಗಂಕೋಟೆ	200	280	380	932	970	418		
	XIX	ಕೈವಾರ	ಕೈವಾರ	160	260	450	779	810	362		
	XX	ಬಟ್ಟಪಹಳ್ಳಿ									
		ಸಾಡ್ಲು	ಬಟ್ಟಪಹಳ್ಳಿ	75	68	361	786	866	406		
	XXI	ಗಂಜಿಗುಂಟೆ								17ನೇ ಮೆ 1895	
		ಬೆಲಕಾಲನೆರ್ಪು	ಗಂಜಿಗುಂಟೆ	85	188	365	815	984	466		
ಬಾಗೇಪಲ್ಲಿ.	XXII	ಬಾಗೇಪಲ್ಲಿ									
		ಗೊಳೂರು									
		ಮಿಟ್ಟೆಮರಿ	ಬಾಗೇಪಲ್ಲಿ	80	100	110	926	922	669		
	XXIII	ಬಿಳ್ಳೂರು									
		ಜೇಲೂರು									
		ಪಾಳ್ಯ	ಪಾಳ್ಯ	45	62	65	619	764	445	15ನೇ ಮೆ 1895	
	XXIV	ಗುಡಿಬಂಡ									
		ಸೋಮನಹಳ್ಳಿ	ಗುಡಿಬಂಡ	30	48	54	504	584	302		
ಗೋರೀಬಿದನೂರು.	XXV	ಗೋರೀಬಿದನೂರು									
		ಮಂಜೇನಹಳ್ಳಿ									
		ತೊಂಡೇಭಾವಿ									
		ಪೊಮ್ಮಸಂದ್ರ	ಗೋರೀಬಿದನೂರು	450	404	762	1737	1664	818	20ನೇ ಮೆ 1895	
		ಹೊಸೂರು									
		ದೊಡ್ಡನಾಯಕನಪಾಳ್ಯ.									
		ನಾಗರಗೆರೆ									

ಷೆಡ್ಯೂಲ್ ಪಟ್ಟಿ.

ತಾಲ್ಲೂಕು.	ಗುತ್ತಿಗೆ ಫಿರ್ಕಾದ ಕ್ರಮ ನಂಬರು.	ಸಾರಾಯಿ ಬಿಕರೀ ಗುತ್ತಿಗೆ ಫಿರ್ಕಾಗಳ ತಪಶೀಲ್. ಫಿರ್ಕಾದಲ್ಲಿ ಅಡಗಿರುವ ಹೋಬಳಿಗಳ ಹೆಸರುಗಳು.	ಗುತ್ತಿಗೆ ಫಿರ್ಕಾದ ಹೆಸರುಗಳು.	ಪ್ರತಿ ಫಿರ್ಕಾದ ಗುತ್ತಿಗೆ ಮೊಬಲಗು. 1892-93	1893-94	1894-95	ಪ್ರತಿ ಒಂದು ಫಿರ್ಕಾದಲ್ಲಿ ಬಿಕರಿಯಾದ ಪರಾಬಿನ ತಪಶೀಲ್. 1892-93.	1893-94	1894—95 ಆರು ತಿಂಗಳು ಬಿಕರಿ.	ಹರಾಜು ತಾರೀಖು.	ಪರಾ.
				ರೂ.	ರೂ.	ರೂ.	ಗ್ಯಾಲನ್	ಗ್ಯಾಲನ್	ಗ್ಯಾಲನ್		
ಚಿಂತಾಮಣಿ.	XXVI	ಚಿಂತಾಮಣಿ	ಕೋಲಾರ್ ಡಿ॥ ಚಿಂತಾಮಣಿ	800	1244	1250	1385	2249	1238	10ನೇ ಮೆ 1895.	
	XXVII	ಅಂಬಾಜಿದುರ್ಗ ಮುರಗಮಲೆ ಇರಗಂಪಲ್ಲಿ ಮಂಗನಹಳ್ಳಿ ಅಡ್ಡಗಲ್	ಅಡ್ಡಗಲ್	135	320	365	771	918	644		
	XXVIII	ಶ್ರೀನಿವಾಸಪುರ	ಶ್ರೀನಿವಾಸಪುರ	260	316	405	756	775	473		
	XXIX	ಸೋವಯಾಜನಪಲ್ಲಿ ನೆಲವಂಕಿ ರಾಯಲ್‌ಪಾಡು	ರೋಣೂರು	230	388	515	1148	1059	529		
ತುಮಕೂರು.	I	ತುಮಕೂರು ಪಳ್ಳಾವಿ ಹೊನ್ನುಡಿಕೆ ಹೆಬ್ಬೂರು ಕೊಳ್ಳಲ ಉರಡಗೆರೆ ಗೂಳೂರು ಕೋರಾ ಹೊಟ್ಟಗೆರೆ	ತುಮಕೂರು ಡಿ॥ ತುಮಕೂರು	1610	1824	1824	4929	4979	2555	1ನೇ ಮೆ 1895.	
ಮದ್ದಗಿರಿ.	II	ಮದ್ದಗಿರಿ ಕೊರಟಗೆರೆ ದೊಡ್ಡೇರಿ ರಂಟವಳಲು ಮಿಡಿಗೇಶಿ ಇಪ್ಪಗೇದಿಬ್ಬನಹಳ್ಳಿ ತೆರಿಯೂರು ಕೊಡಿಗೇನಹಳ್ಳಿ ಪುರವಾರ ಜನ್ನಾಯದುರ್ಗ ಹೊಳವನಹಳ್ಳಿ	ಮದ್ದಗಿರಿ	110	132	330	926	1003	853	9ನೇ ಮೆ 1895.	
ಪಾವಗಡ.	III	ಪಾವಗಡ ಮುಗ್ದಲಬೆಟ್ಟ ಗೂಂಗಟ್ಟಾ ನಿಡಗಲ್ ಹೊಸಕೋಟೆ ಪೊನ್ನಸಮುದ್ರ ರಾಚರ್ಲು	ಪಾವಗಡ	30	32	80	420	461	294	13ನೇ ಮೆ 1895.	

ಷೆಡ್ಯೂಲ್ ಪಟ್ಟಿ.

ತಾಲ್ಲೂಕು.	ಗುತ್ತಿಗೆ ಫಿರ್ಕಾದ ಕ್ರಮ ನಂಬರು.	ಸಾರಾಯಿ ಬಿಕಿಕರೀ ಗುತ್ತಿಗೆ ಫಿರ್ಕಾಗಳ ತಪಶೀಲ್. ಫಿರ್ಕಾದಲ್ಲಿ ಅಡಗಿರುವ ಹೋಬಳಿಗಳ ಹೆಸರುಗಳು.	ಗುತ್ತಿಗೆ ಫಿರ್ಕಾದ ಹೆಸರುಗಳು.	ಪ್ರತಿ ಫಿರ್ಕಾದ ಗುತ್ತಿಗೆ ಮೊಬಲಗು. 1892—93	1893—94	1894—95	ಪ್ರತಿಬಂದು ಫಿರ್ಕಾದಲ್ಲಿ ಬಿಕರಿಯಾದ ಪರಾಬಿನ ತಪಶೀಲ್. 1892—93	1893—94	1894—95 ಆರು ತಿಂಗಳ ಬಿಕ್ರಿ	ಹರಾಜು ತಾರೀಖು.	ಪರಾ.
				ರೂ.	ರೂ.	ರೂ.	ಗ್ಯಾಲ.	ಗ್ಯಾಲ.	ಗ್ಯಾಲ.		
ತಿಪಟೂರು.	IV	ತಿಪಟೂರು ಮಾಯಸಂದ್ರ ತುರುವೆಕೆರೆ ಹೊನ್ನವಳ್ಳಿ ಹುಲಿಕುಕ್ಕಿ ನೋಣವಿನಕೆರೆ ಈಚನೂರು ಕಿಬ್ಬನಹಳ್ಳಿ ದಬ್ಬಗಟ್ಟ	ತಿಪಟೂರು ..	240	140	402	1204	1456	802	3ನೇ ಮೆ 1895.	
ಚಿಕ್ಕನಾಯಕನಹಳ್ಳಿ.	V	ಚಿಕ್ಕನಾಯಕನಹಳ್ಳಿ ಹುಳಿಯಾರು ಕಟ್ಟಿಕೆರೆ ಖಂಡಿಕೆರೆ ಹಂದಿನಕೆರೆ ಬೂದಿಹಾಳು ಯಲನೋಡು	ಚಿಕ್ಕನಾಯಕನಹಳ್ಳಿ	155	80	120	1356	903	413	20ನೇ ಮೆ 1895.	
ಕೀರಾ.	VI	ಕೀರಾ ತಾವರೆಕೆರೆ ಕಲ್ಲಂಬೆಳ್ಳ ಅಗ್ರಹಾರ ಬುಕ್ಕಾಪಟ್ಟಣ	ಕೀರಾ ..	205	480	636	2042	2140	1142	16ನೇ ಮೆ 1895.	
	VII	ನಾದೂರು ಹುಲಿಕುಂಟೆ ಬರಗೂರು	ನಾದೂರು ..	270							
ಗುಬ್ಬಿ.	VIII	ಗುಬ್ಬಿ ಜೇಲೂರು ಹಾಗಲ್ವಾಡಿ	ಗುಬ್ಬಿ ..	370	464	480	1640	1550	773	4ನೇ ಮೆ 1895.	
	IX	ನಿಟ್ಟೂರು ಕಡಬ ಕಲ್ಲೂರು ಚಿಟ್ಟನಹಳ್ಳಿ ದಂಡಿನಶಿವರ	ನಿಟ್ಟೂರು ..	185							
ಕುಣಿಗಲ್.	X	ಕುಣಿಗಲ್ ಹುಲಿಯೂರುದುರ್ಗ ಅಮೃತೂರು ಎಡಿಯೂರು ಕೊತ್ತಗೆರೆ ಹುತ್ರಿದುರ್ಗ ಬ್ಯಾಡ್ರಹಳ್ಳಿ	ಕುಣಿಗಲ್ ..	255	240	307	943	950	447	6ನೇ ಮೆ 1895.	

ಷೆಡ್ಯೂಲ್ ಪಟ್ಟಿ.

ತಾಲ್ಲೂಕು.	ಗುತ್ತಿಗೆ ಫಿರ್ಕಾದ ಕ್ರಮ ನಂಬರು.	ಸರಾಯಿ ಬಿಕ್ರೀ ಗುತ್ತಿಗೆ ಫಿರ್ಕಾಗಳ ತಪಶೀಲು. ಫಿರ್ಕಾದಲ್ಲಿ ಅಡಗಿರುವ ಹೋಬಳಿಗಳ ಹೆಸರು.	ಗುತ್ತಿಗೆ ಫಿರ್ಕಾದ ಹೆಸರುಗಳು.	ಪ್ರತಿ ಫಿರ್ಕಾದ ಗುತ್ತಿಗೆ ಮೊಬಲಗು. 1892—93	1893—94	1894—95	ಪ್ರತಿ ವಂದು ಫಿರ್ಕಾದ ಬಿಕರಿಯಾದ ಪರಾಬಿನ ತಪಶೀಲ್. 1892—93	1894—95	1894—95 ಆಯುತಿಂಗಳ ಬಿಕರಿ	ಪೂರಾಜು ತಾರೀಖು.	ಪರ.
				ರೂ.	ರೂ.	ರೂ.	ಗ್ಯಾಲಾ	ಗ್ಯಾಲಾ	ಗ್ಯಾಲಾ		
			ಮೈಸೂರು ಡಿಸ್ಟ್ರಿಕ್ಟ್.								
ಮೈಸೂರು.	I	ಕಡಕೋಳ ಇಲವಾಲ ವರಕೋಡು ಕಸಾರಿ ಯಾ ನವಾಪಹರ್. ಕೂಡನಹಳ್ಳಿ ಲಿಂಗಾಂಬುಧಿ ಸಿಂದವಳ್ಳಿ ಮೈಸೂರು ಆನಂದೂರು	ಮೈಸೂರು ..	55	24	2	120	77	48	1ನೇ ಮೇ 1895.	
ನಂಜನಗೂಡು.	II	ನಂಜನಗೂಡು ಕಳಲಿ ಹೆಡತಲೆ ಹದಿನಾರು ದೇವನೂರು ಹುರ ರಾಂಪುರ ತಾಯೂರು ದಾಸನೂರು	ನಂಜನಗೂಡು ..	550	540	*775	6020	1755	750	22ನೇ ಮೇ 1895.	*ಕಾಪು ಕೊಳದ ಆಗಡಿಯಾಗ ಪ್ರಾ ಸೊಂಬಲಗು ಕೀಲಿದೆ.
ಗುಂಡ್ಲು.	III	ಗುಂಡ್ಲು ರಾಘವಾಪುರ ಕೆಲಸೂರು ತಿರಕಣಾಂಬಿ ಹಂಗಳ ಕುತ್ತನೂರ	ಗುಂಡ್ಲು ..			305	639	618	447	13ನೇ ಮೇ 1895.	
ಹುಣಸೂರು.	IV	ಕಿರಜಾಜಿ ಪರಿಯಾಪಟ್ಣ ಬಿಳಿಕೆರೆ ಗಾಡಕೆರ ಚಿಲಕುಂಡ ರಾವಂದೂರು ಪಟ್ಟದಪುರ ಹಾರ್ನಹಳ್ಳಿ ಕಗುಂದಿ ಹೆಗ್ಗಂದೂರು	ಹುಣಸೂರು ..	700	922 15	1200 292	3316 610	3424 1000	1567 570	6ನೇ ಮೇ 1895.	
ಯಡತೊರೆ.	V	ಯಡತೊರೆ ಸಾಲಿಗ್ರಾಮ ಬ್ಯಾಡರಹಳ್ಳಿ ಹರದನಹಳ್ಳಿ ಮಿರ್ಲೆ ತಿಪ್ಪೂರು ಹನಸೋಗೆ	ಯಡತೊರೆ ..							4ನೇ ಮೇ 1895.	
			ನಂಜಲಕಪುರ ..	1700	3200	2800	5118	5960	3110		

ಷೆಡ್ಯೂಲ್ ಪಟ್ಟಿ.

ತಾಲ್ಲೂಕು.	ಗುತ್ತಿಗೆ ಫಿರ್ಕಾದ ಕ್ರಮ ನಂಬರು.	ಸಾರಾಯಿ ಬಿಕ್ರೀ ಗುತ್ತಿಗೆ ಫಿರ್ಕಾಗಳ ತಪ್ಶೀಲ್.		ಪ್ರತಿ ಫಿರ್ಕಾದ ಗುತ್ತಿಗೆ ಮೊಬಲಗು.			ಪ್ರತಿ ವಂದು ಫಿರ್ಕಾದ ಲಿ ಬಿಕರಿಯಾದ ಪರಾ ಬಿನ ತಪ್ಶೀಲ್.			ಪರಾಮು ತಾರೀಖು.
		ಫಿರ್ಕಾದಲ್ಲಿ ಅಡಗಿರುವ ಹೋಬಳಿಗಳ ಹೆಸರುಗಳು.	ಗುತ್ತಿಗೆ ಫಿರ್ಕಾದ ಹೆಸರುಗಳು.	1892—93	1893—94	1894—95	1892—93	1893—94	1894—95 (ಅಂದಾಜಿಕೆ)	
				ರೂ.	ರೂ.	ರೂ.	ಗ್ಯಾಲ.	ಗ್ಯಾಲ.	ಗ್ಯಾಲ.	
ಶ್ರೀರಂಗಪಟ್ಟಣ.	VI	ಕುರುಬರ ಶ್ರೀರಂಗಪಟ್ಟಣ	ಶ್ರೀರಂಗಪಟ್ಟಣ	760	920	1666	2112	2527	2270	25ನೇ ಮೇ 1895.
		ಪೂಲಹಳ್ಳಿ								
		ಕ್ಯಾತನಹಳ್ಳಿ								
		ಹರವು								
		ಕಪ್ಪಡಹಳ್ಳಿ								
		ಅರಕೆರೆ								
		ಬೆಳಗೋಳಾ								
	VII	ಚಂದಗಲ್								
		ಕಿರಂಗೂರು								
		ಮೇಲ್ಕೋಟೆ								
		ತಿರುಮಲನಾಗರಛತ್ರ								
ಹಗ್ಗಡದೇವನಕೋಟೆ.	VIII	ಹಗ್ಗಡದೇವನಕೋಟೆ	ಹಗ್ಗಡದೇವನಕೋಟೆ	105	96	167	826	868	532	9ನೇ ಮೇ 1895.
		ಅಂತರಸಂತೆ								
		ಸರಗೂರು								
		ನೆಮ್ಮನಹಳ್ಳಿ								
		ಜೈಹಳ್ಳಿ								
ಮಂಡ್ಯ.	IX	ಮಂಡ್ಯ	ಮಂಡ್ಯ	260	270	513	1388	1634	1014	29ನೇ ಮೇ 1895.
		ಯಲಿಯೂರು								
		ಕೊತ್ತತ್ತಿ								
		ಬನರಾಳ್								
		ಮುತ್ತಗೆರೆ								
		ದುದ್ದ								
	X	ಮದ್ದೂರು								
		ಕೊಪ್ಪ								
		ಆಣೆ ಅಥವ ಹೊಸಕೆರೆ								
		ಆಟಿಗೂರು								
		ತಿಪ್ಪೂರು								
		ಕುದುರೆಗುಂಡಿ								
ನಾಗಮಂಗಲ.	XI	ನಾಗಮಂಗಲ	ನಾಗಮಂಗಲ	110		245	557	690	355	1ನೇ ಜೂ॥ 1895.
		ನೆಲ್ಲಿಗೆರೆ								
		ಬೆಂಡಿಗನವಲೆ								
		ಹೊಣಕೆರೆ								
		ದೇವಲಾಪುರ								
ಮಳವಳ್ಳಿ.	XII	ಮಳವಳ್ಳಿ	ಮಳವಳ್ಳಿ	270	192	570	1338	1716	979	27ನೇ ಮೇ 1895.
		ಪೊರಿಗಾಲ್								
		ಹಲಗೂರು								
		ದೊಡ್ಡ ಅರಸಿನಕೆರೆ								
		ಕುಳಗೆರೆ								
		ಗೂಡಗೆರೆ								
		ಕಿರಗಾವಲು								

ಷೆಡ್ಯೂಲ್ ಪಟ್ಟಿ.

ತಾಲ್ಲೂಕು.	ಗುತ್ತಿಗೆ ಫಿರ್ಕಾದ ಸಂಖ್ಯೆಯ ನಂಬರು.	ಸಾರಾಯಿ ಬಿಕ್ರಿ ಗುತ್ತಿಗೆ ಫಿರ್ಕಾಗಳ ತಪಶೀಲು. ಫಿರ್ಕಾದಲ್ಲಿ ಅಡಗಿರುವ ಹೋಬಳಿಗಳ ಹೆಸರುಗಳು.	ಗುತ್ತಿಗೆ ಫಿರ್ಕಾದ ಹೆಸರುಗಳು.	ಪ್ರತಿ ಫಿರ್ಕಾದ ಗುತ್ತಿಗೆ ಮೊಬಲಗು. 1892—93 ರೂ.	1893—94 ರೂ.	1894—95 ರೂ.	ಪ್ರತಿ ಒಂದು ಫಿರ್ಕಾದಲ್ಲಿ ಬಿಕರಿಯಾದ ಪರಾಬಿನ ತಪಶೀಲ್. 1892—93 ಗ್ಯಾಲನ್	1893—94 ಗ್ಯಾಲನ್	1894—95 ಅರು ತಿಂಗಳ ಕರಿ ಗ್ಯಾಲನ್	ಪರಾಜು ತಾರೀಖು.	ಪರಾ.
ತಿರುಮಕೂಡು ನರಸೀಪುರ.	XIII	ತಿರುಮಕೂಡು ನರಸೀಪುರ ಬನ್ನೂರು ತಲಕಾಡು ಸೋಸಲೆ ರಂಗಸಮುದ್ರ ಮೂಗೂರು ಬೇವಿನಹಳ್ಳಿ	ಟಿ. ನರಸೀಪುರ ಮತ್ತು			372	1019	1026	564	20ನೇ ಮೇ 1895.	ಟಿ. ನರಸೀಪುರದ ತಾಲ್ಲೂಕು ಕಚೇರಿಯಲ್ಲಿ ಹರಾಜು ಹಾಕಲ್ಪಡುವದು.
ಚಾಮರಾಜನಗರ.	XIV	ಚಾಮರಾಜನಗರ ಸಂತೆಮಾರ್ನಹಳ್ಳಿ ಆಲೂರು ಕಾಗಲ್ವಾಡಿ ಹರದನಹಳ್ಳಿ ಉಯ್ಯಂಬಳ್ಳಿ ಉಮ್ಮತ್ತೂರು ಬ್ಯಾಡರಪುರ ಹೊಂಗನೂರು ಕೊತ್ತಲ್ವಾಡಿ	ಚಾಮರಾಜನಗರ	200	171	100	260	333	215	16ನೇ ಮೇ 1895.	
ಯಳಂದೂರ	XV	ಅಗರ ಯಳಂದೂರು ಯರಗಂಬಳ್ಳಿ	ಯಳಂದೂರು	210	122	230	574	761	554	20ನೇ ಮೇ 1895.	
ಅತ್ತಿಕುಪ್ಪೆ	XVI	ಅತ್ತಿಕುಪ್ಪೆ ಯಾ ಕೃಷ್ಣರಾಜಪೇಟೆ ಕಿಕ್ಕೇರಿ ಚಿಕ್ಕಕುರುಬಿ ಸಂತೆಬಾಚಹಳ್ಳಿ ಅಕ್ಕಹೆಬ್ಬಾಳು ಕನ್ನಂಬಾಡಿ ಚಾಮುಂಡಿಜಾತ್ರೆ ಸುಬ್ರಾಯ್ಯ ಜಾತ್ರೆ	ಅತ್ತಿಕುಪ್ಪೆ ಯಾ ಕೃಷ್ಣರಾಜಪೇಟೆ	40	5 4 5	101 10	.. ..	125 ..	171 ..	3ನೇ ಜೂ॥ 1895.	
ಹಾಸನ.	I	ಹಾಸನ ಡಿಸ್ಟ್ರಿಕ್ಟ್. ಹಾಸನ ಸೂಲಗಾಮೆ ದುದ್ದ ಗ್ರಾಮ	ಹಾಸನ	1950	2529	2400	4601	4953	2245	1ನೇ ಮೇ 1895.	
	II	ಆಲೂರು ಪಾಳ್ಯ ಕಟ್ಟಾಯಿ ಬೈಲಹಳ್ಳಿ ಪೊನ್ನಾಥಪುರ	ಆಲೂರು	350	677	620	1385	1371	714		
ಪೆಂಜರಾಬಾದು	III	ಸಕಲೇಶಪುರ ಬೆಳಗೋಡು ಹಾರ್ಬಾಳ್ ಮಾರ್ನಹಳ್ಳಿ	ಸಕಲೇಶಪುರ	1700	3200	2800	5118	5960	3110	13ನೇ ಮೇ 1895.	
	IV	ಯಸಳೂರು ಬ್ಯಾಗಡಹಳ್ಳಿ	ಯಸಳೂರು	450	1040	855	1734	1902	1021		

ಷೆಡ್ಯೂಲ್ ಪಟ್ಟಿ.

ತಾಲ್ಲೂಕು.	ಗುತ್ತಿಗೆ ಫಿರ್ಕಾದ ನಂಬರು.	ಸಾರಾಯಿ ಬಿಕ್ರಿ ಗುತ್ತಿಗೆ ಫಿರ್ಕಾಗಳ ತಪಶೀಲು.		ಪ್ರತಿ ಫಿರ್ಕಾದ ಗುತ್ತಿಗೆ ಮೊಬಲಗು.			ಪ್ರತಿ ಒಂದು ಫಿರ್ಕಾದಲ್ಲಿ ಬಿಕರಿಯಾದ ಷರಾಬಿನ ತಫ್ಸೀಲ್.			ಪರಾ.
		ಫಿರ್ಕಾದಲ್ಲಿ ಅಡಗಿರುವ ಹೋಬಳಿಗಳ ಹೆಸರುಗಳು.	ಗುತ್ತಿಗೆ ಫಿರ್ಕಾದ ಹೆಸರುಗಳು.	1892—93	1893—94	1894—95	1892—93	1893—94	1894—95 ಆರುತಿಂಗಳ ಬಿಕ್ರಿ.	ಹರಾಜು ತಾರೀಖು.
				ರೂ.	ರೂ.	ರೂ.	ಗ್ಯಾಲಾ	ಗ್ಯಾಲಾ	ಗ್ಯಾಲಾ.	
ನಂಜನಗೂಡು.	V	ಹೊಸಕೋಟೆ ಯಾ ಮುತ್ತಗಿ ಕುಕ್ಕ್ವಾರಸಂತೆ ಯ ಬೆಳ್ಳೂರು	ಕುಕ್ಕ್ವಾರ ಸಂತೆ ಅಥವ ಬೆಳ್ಳೂರು ..	250	1040	1800	1513	1579	1266	
ಟಿ.ನರಸೀಪುರ.	VI	ಬೇಲೂರು ..	ಬೇಲೂರು ..	1425	2180	2000	3651	3839	2253	15ನೇ ಮೇ 1895
		ಕನಿವಾರಸಂತೆ ..								
		ತೊಗರೆ ..								
		ಅರಹಳ್ಳಿ ..								
		ಬಿಕೋಡು ..								
	VII	ಮಾದಿಹಳ್ಳಿ ..								
		ಹಳೇಬೀಡು ..								
ಅರಕಲಗೂಡು.	VIII	ಅರಕಲಗೂಡು ..	ಅರಕಲಗೂಡು ..	85	505	706	881	671	629	10ನೇ ಮೇ 1895
		ಕೋಣನೂರು ..								
		ಮರೂರು ..								
		ಮಲ್ಲಾಪಟ್ಟ ..								
		ಬಸವಾಪಟ್ಟಣ ..								
		ಕೃಷ್ಣರಾಜಕಟ್ಟೆ ..								
ಹೊಳೇನರಸೀಪುರ.	IX	ಹೊಳೇನರಸೀಪುರ ..	ಹೊಳೇನರಸೀಪುರ ..	110	256	562	752	673	424	8ನೇ ಮೇ1895
		ದೊಡ್ಡಕಾಡನೂರು ..								
		ಹಳೇಕೋಟೆ ..								
		ಗುಬ್ಬಿ ..								
ಚನ್ನರಾಯಪಟ್ಟಣ.	X	ಚನ್ನರಾಯಪಟ್ಟಣ ..	ಚನ್ನರಾಯಪಟ್ಟಣ ..	35	106	250	215	549	419	6ನೇ ಮೇ 1895
		ಹಿರೇಸಾವೆ ..								
		ನುಗ್ಗಿಹಳ್ಳಿ ..								
		ಶ್ರವಣಬೆಳಗೊಳ ..								
		ದಂಡಿಗಾನಹಳ್ಳಿ ..								
		ಅನತಿ ..								
		ಬಾಗೂರು ..								
ಅರಸೀಕೆರೆ.	XI	ಅರಸೀಕೆರೆ ..	ಅರಸೀಕೆರೆ ..	800	650	700	2098	2242	1172	3ನೇ ಮೇ 1895
		ಹಾರನಹಳ್ಳಿ ..								
		ಬಾಣಾವಾರ ..								
		ಗಂಡಸಿ ..								
		ಜಾವಗಲ್ ..								
		ಕಂಗಟ್ಟ ..								
		ಕಡೂರು ಡಿಸ್ಟ್ರಿಕ್ಟ್.								
ಕಡೂರು.	I	ಕಡೂರು ..	ಕಡೂರು ..	255	496	650	1925	2431	919	3ನೇ ಮೇ 1895
		ಸಕ್ರೆಪಟ್ಟಣ ..								
		ಯಾಗಟಿ ..								
		ಬಿದರೆ ..								
	II	ಬೀರೂರು ..	ಬೀರೂರು ..	255	441	420				
		ಹಿರೇನಲ್ಲೂರು ..								

ಷೆಡ್ಯೂಲ್ ಪಟ್ಟಿ.

ತಾಲ್ಲೂಕು.	ಗುತ್ತಿಗೆ ಫಿರ್ಕಾದ ಕ್ರಮ ನಂಬರ್.	ಸಾರಾಯಿ ಬಿಕರೀ ಗುತ್ತಿಗೆ ಫಿರ್ಕಾಗಳ ತಪಸೀಲು.		ಪ್ರತಿ ಫಿರ್ಕಾದ ಗುತ್ತಿಗೆ ಮೊಬಲಗು.			ಪ್ರತಿ ಒಂದು ಫಿರ್ಕಾದಲ್ಲಿ ಬಿಕರಿಯಾದ ಪರಾಬಿನ ತಫ್ಸೀಲ್.			ಜಾಸ್ತಿ ತಾರೀಖು.	ಷರಾ.
		ಫಿರ್ಕಾದಲ್ಲಿ ಅಡಗಿರುವ ಹೋಬಳಿಗಳ ಹೆಸರುಗಳು.	ಗುತ್ತಿಗೆ ಫಿರ್ಕಾದ ಹೆಸರುಗಳು.	1892—93.	1893—94.	1894—95.	1892—93.	1893—94.	1894—95. ಆರುತಿಂಗಳ ಬಿಕ್ರಿ.		
				ರೂ.	ರೂ.	ರೂ.	ಗ್ಯಾಲ.	ಗ್ಯಾಲ.	ಗ್ಯಾಲ.		
ಚಿಕ್ಕಮಗಳೂರು.	III	ಚಿಕ್ಕಮಗಳೂರು	ಚಿಕ್ಕಮಗಳೂರು	3100	5600	5350	9521	11300	6162	1ನೇ ಮೇ 1895.	
	IV	ಮೂರೆ ಲಾಖ್ಯ ಜಾಗ್ರ									
	V	ವಸ್ತಾರ	ವಸ್ತಾರ	635	2256	2840	4548	5581	2965		
	VI	ಬಿದರನಾಡು ಕಡಗಲ್ನಾಡು ಖಾಂಡ್ಯ	ಆಲ್ದೂರು	410	1920	1955	3347	3813	2042		
ಮೂಡಿಗೆರೆ.	VII	ಮೂಡಿಗೆರೆ ಗೋಣೀಬೀಡು	ಮೂಡಿಗೆರೆ		2068	2330	4357	5890	3420	11ನೇ ಮೇ 1895.	
	VIII	ಬಾಂಕಲ್ಲು ಮೇಲ್ಭಂಗಾಡಿ ಕಲಸ	ಬಾಂಕಲ್ಲು	690	1208	1502	2586	3253	2046		
ತರೀಕೆರೆ.	IX	ತರೀಕೆರೆ ಅಜಂಪುರ									
	X	ಶಿವನೆ ಅಮೃತಪುರ	ತರೀಕೆರೆ	710	1800	1800	2404	2533	1278	6ನೇ ಮೇ 1895.	
	XI	ಲಿಂಗದಹಳ್ಳಿ	ಲಿಂಗದಹಳ್ಳಿ	805	1808	2200	2886	3966	1983		
		ಲಕ್ಕವಳ್ಳಿ	ಲಕ್ಕವಳ್ಳಿ	100	188	250	407	49	322		
ಕೊಪ್ಪ.	XII	ಕೊಪ್ಪ	ಕೊಪ್ಪ	510	2400	1586	3137	4764	2241	9ನೇ ಮೇ 1895.	
	XIII	ಹೊಸಕೆರೆ ಬಿಳೇರಿ ಕಿಗ್ಗ	ಹರಿಹರಪುರ	325	704	526	1997	1593	858		
	XIV	ಬಸುಂಜೆ ಮೇಗುಂದ	ಸೊಳ್ಳೆಬೈಲು	290	840	780	1713	2094	1037		
	XV	ಎಡೆಹಳ್ಳಿ	ಎಡೆಹಳ್ಳಿ	110	608	526	1363	1090	628		
	XVI	ಬಾಳೇಹೊನ್ನೂರು	ಬಾಳೇಹೊನ್ನೂರು	115	400	350	855	872	485		
	XVII	ಶೃಂಗೇರಿ	ಶೃಂಗೇರಿ	400	552	841	1503	1836	939		

ಶಿವಮೊಗ್ಗ ಡಿಸ್ಟ್ರಿಕ್ಟು.

ಶಿವಮೊಗ್ಗ.	I	ಶಿವಮೊಗ್ಗ	ಶಿವಮೊಗ್ಗ	4965	5008	4350	8136	8865	4871	1ನೇ ಮೇ 1895.	
	II	ಹೊಳಲೂರು	ಹೊಳಲೂರು	95	93	81	306	485	172		
	III	ಬಿದರೆ	ಬಿದರೆ	200	522	560	1326	1412	688		
	IV	ಹೊಳೇಹೊನ್ನೂರು	ಹೊಳೇಹೊನ್ನೂರು	300	348	365	765	903	388		
	V	ಬೆಂಕೀಪುರ	ಬೆಂಕೀಪುರ	870	826	732	1593	1792	909		
	VI	ಹಾರ್ನಹಳ್ಳಿ ಕುಂಸಿ	ಐನೂರು	810	856	720	1942	1894	953		
ಹೊನ್ನಾಳಿ.	VII	ಹೊನ್ನಾಳಿ ಸಾಸುವೆಹಳ್ಳಿ	ಹೊನ್ನಾಳಿ	780	672	500	1620	2019	924		
	VIII	ಬೆಲಗುತ್ತಿ	ನ್ಯಾಮತಿ	1395	1057	775	2176	2311	1194		

ಷೆಡ್ಯೂಲ್ ಪಟ್ಟಿ.

ತಾಲ್ಲೂಕು.	ಗುತ್ತಿಗೆ ಫಿರ್ಕಾದ ಕ್ರಮಸಂಖ್ಯೆ.	ಸಾರಾಯಿ ಬಿಕ್ರೀ ಗುತ್ತಿಗೆ ಫಿರ್ಕಾಗಳ ತಪಶೀಲು.		ಪ್ರತಿ ಫಿರ್ಕಾದ ಗುತ್ತಿಗೆ ಮೊಬಲಗು.			ಪ್ರತಿ ಬಂದು ಫಿರ್ಕಾದಲ್ಲಿ ಬಿಕರಿಯಾದ ಪರಾಬಿನ ತಪಶೀಲು.			ಹರಾಜ್ ತಾರೀಖು.	ಪರಾ.
		ಫಿರ್ಕಾದಲ್ಲಿ ಅಡಗಿರುವ ಹೋಬಳಿಗಳ ಹೆಸರುಗಳು.	ಗುತ್ತಿಗೆ ಫಿರ್ಕಾದ ಹೆಸರುಗಳು.	1892—93	1893—94	1894—95	1892—93	1893—94	1894—95 ಅಂದಾಜಿಂಗೆ ಬಿಕ್ರಿ.		
				ರೂ.	ರೂ.	ರೂ.	ಗ್ಯಾಲ.	ಗ್ಯಾಲ.	ಗ್ಯಾಲಾ.		
ಚನ್ನಗಿರಿ.	IX	ಚನ್ನಗಿರಿ ..	ಚನ್ನಗಿರಿ ..	335	306	260	916	1111	555	1ನೇ ಮೇ 1895.	
		ನಲ್ಲೂರು ..									
		ಬಸವಾಪಟ್ಟಣ ಹೊಸಕೆರೆ. ..									
		ಸಂತೆಬೆನ್ನೂರು ..									
		ಉಬ್ರಾಣಿ ..									
ಶಿಕಾರಿಪುರ.	X	ಶಿಕಾರಿಪುರ ..	ಶಿಕಾರಿಪುರ ..	1205	1106	846	2023	1992	943		
	XI	ಮುಗಳಗೆರೆ ..	ಮುಗಳಗೆರೆ ..	710	705	721	1703	1787	1043		
		ಹೊಸೂರೂ ..									
		ಉಡುಗಣಿ ..									
		ತಲಗುಂದ ..									
	XII	ಬಿಳಂದೂರು ..	ಬಿಳಂದೂರು ..	115	208	152	634	691	445		
ಸಾಗರ.	XIII	ಹುಂಜೆ ..	ಸಾಗರ ..	65	160	85	735	885	480		
		ಕರೇಹಳ್ಳಿ ..									
		ನಗರ ..									
		ಪುಟ್ಟಗುಪ್ಪಿ ..									
		ಹರತಲೆ ..									
ಸಾಗರ.	XIV	ಜಾಲ ..	ಸಾಗರ ..	1350	1205	720	2316	2565	1899		
		ಸಾಗರ ..									
		ಅನಂತಪುರ ..									
		ಇಕ್ಕೇರಿ ..									
	XV	ತಲಗೊಪ್ಪ ..	ತಲಗೊಪ್ಪ ..	165	80	42	898	1085	226		
		ಕರೂರು ..									
		ಭಾರಂಗಿ ..									
ಸೊರಬ.	XVI	ಸೊರಬ ..	ಸೊರಬ ..	560	764	530	1607	1734	919		
		ಕ್ಯಾಸನೂರು ..									
		ಚಂದ್ರಗುತ್ತಿ ..									
	XVII	ತವನಂದಿ ..	ಅಣವಟ್ಟಿ ..	350	696	380	1320	1531	648		
		ಅಣವಟ್ಟಿ ..									
		ತಲಗುಜ್ಜಿ ..									
ತೀರ್ಥಹಳ್ಳಿ.	XVIII	ಅರಗ ..	ತೀರ್ಥಹಳ್ಳಿ ..	1055	1141	1120	2227	2148	1154		
	XIX	ಅಗ್ರಹಾರ ..	ಅಗ್ರಹಾರ ..	205	392	400	1074	1346	822		
	XX	ಮಿಡ್ಲೂರು ..	ಹಿರೇಮತ್ತೂರು ..	235	385	375	1008	1072	598		
	XXI	ಆಗುಂಬಿ ..	ಆಗುಂಬಿ ..	141	385	300	851	1086	686		
	XXII	ಮಂಡಗದ್ದೆ ..	ಮಂಡಗದ್ದೆ ..	485	617	460	6547	1267	743		
ಚಿತ್ರದುರ್ಗ.		ಚಿತ್ರದುರ್ಗ ಡಿಸ್ಟ್ರಿಕ್ಟ್.									
	I	ಚಿತ್ರದುರ್ಗ ..	ಚಿತ್ರದುರ್ಗ ..	910	640	690	1429	1636	1020	1ನೇ ಮೇ 1895.	
		ತುರನೂರು ..									
		ಭರಮಸಾಗರ ..									
		ಹಿರೆಗುಂಟನೂರು ..									

ಷೆಡ್ಯೂಲ್ ಪಟ್ಟಿ.

ತಾಲ್ಲೂಕು.	ಗುತ್ತಿಗೆ ಫಿರ್ಕಾದ ಕ್ರಮ ಸಂಖ್ಯೆ.	ಸಾರಾಯಿ ಬಿಕರಿ ಗುತ್ತಿಗೆ ಫಿರ್ಕಾಗಳ ತಪಶೀಲು. ಫಿರ್ಕಾದಲ್ಲಿ ಅಡಗಿರುವ ಹೋಬಳಿಗಳ ಹೆಸರುಗಳು.	ಗುತ್ತಿಗೆ ಫಿರ್ಕಾದ ಹೆಸರುಗಳು.	ಪ್ರತಿ ಫಿರ್ಕಾದ ಗುತ್ತಿಗೆ ಮೊಬಲಗು. 1892—93.	1893—94.	1894—95.	ಪ್ರತಿ ಒಂದು ಫಿರ್ಕಾದಲ್ಲಿ ಬಿಕರಿಯಾದ ಪರಾಬಿನ ತಪಶೀಲ್. 1892—93.	1893—94.	1894—95. ಉಂಡಿಂಗಳ ಬಿಕರಿ.	ಹರಾಜು ತಾರೀಖು.	ಷರಾ.
				ರೂ.	ರೂ.	ರೂ.	ಗ್ಯಾಲಾ	ಗ್ಯಾಲಾ	ಗ್ಯಾಲಾ.		
ಜಗಲೂರು.	II	ಜಗಲೂರು.	ಜಗಲೂರು	46	37	40	197	198	92	20ನೇ ಮೇ 1895	
		ಬಿಳಚೋಡು									
		ಸೊಕ್ಕೆ									
ದಾವಣಗೆರೆ.	III	ದಾವಣಗೆರೆ	ದಾವಣಗೆರೆ	905	724	1052	1322	1246	648	1895.	
		ಮಾಯಕೊಂಡ									
		ಹಡದಿ									
		ಅಣಿಗೋಡು									
		ಅಣಜಿ									
	IV	ಹರಿಹರ	ಹರಿಹರ	1310	762	755	1581	1836	811	4ನೇ ಮೇ 1895.	
		ಮಳೇಬೆನ್ನೂರು									
		ಕೊಂಡಜ್ಜಿ									
ಹೊಳಕಾಲ್ಮುರು.	V	ಹೊಳಕಾಲ್ಮುರು	ಹೊಳಕಾಲ್ಮುರು	100	68	215	712	687	460	10ನೇ ಮೇ 1895.	
		ದೇವಸಮುದ್ರ									
ಹೊಳಲ್ಕೆರೆ.	VI	ಹೊಳಲ್ಕೆರೆ	ಹೊಳಲ್ಕೆರೆ	130	87	90	566	684	441	6ನೇ ಮೇ 1895.	
		ಭರಮನಾಯಕನದುರ್ಗ									
		ತಾಳ್ಯ									
		ರಾಮಗಿರಿ									
		ಹೊಸದುರ್ಗ									
		ಬಾಗೂರು									
ಚಿಳ್ಳಕೆರೆ.	VII	ಚಿಳ್ಳಕೆರೆ	ಚಿಳ್ಳಕೆರೆ	110	78	140	686	629	414	13ನೇ ಮೇ 1885.	
		ತಳಕ									
		ನಾಯಕನಹಟ್ಟಿ									
		ಪರಶುರಾಮಪುರ									
ಹಿರಿಯೂರು.	VIII	ಹಿರಿಯೂರು	ಹಿರಿಯೂರು	155	160	163	495	409	227	16ನೇ ಮೇ 1895.	
		ಐಮಂಗಲ									
		ಜುವನಗೊಂಡನಹಳ್ಳಿ									
		ಧರ್ಮಾಪುರ									
		ಲಕ್ಕಿಹಳ್ಳಿ									